ಐಕ್ಯರಂಗ

ವಾರಪತ್ರಿಕೆ

ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಕರ್ನಾಟಕ ರಾಜ್ಯ ಸಮಿತಿಯ ಮುಖಪತ್ರಿಕೆ

ಸಂಪುಟ 9 ಸಂಚಿಕೆ 33 ಆಗಸ್ಟ್ 16, 1987 ಬೆಲೆ 1 ರೂ.

ಒಳಗಿನ ಪುಟಗಳಲ್ಲಿ

ರಾಜೀವ್‌ಗಾಂಧಿಯವರ ರಾಜೀನಾಮೆಗಾಗಿ ಸಂಯುಕ್ತ ಚಳುವಳಿ

- ಕೇಂದ್ರ ಸಮಿತಿ ನಿರ್ಣಯ

ರಾಜೀವ್ ಗಾಂಧಿಯವರ ರಾಜೀನಾಮೆಗಾಗಿ,ಲೋಕ ಸಭೆಗೆ ಮಧ್ಯಂತರ ಚುನಾವಣೆ ನಡೆಸ ಬೇಕೆಂಬುದನ್ನು ಒಪ್ಪುವ ಎಲ್ಲಾ ಜಾತ್ಯಾತೀತ ಪ್ರಜಾಸತ್ತಾತ್ಮಕ ಶಕ್ತಿಗಳನ್ನೂ ಒಗ್ಗೂಡಿಸಿ ಚಳುವಳಿ ಹೂಡ ಬೇಕೆಂದು ಸಿ.ಪಿ.ಐ.(ಎಂ) ಕೇಂದ್ರ ಸಮಿತಿ ತಿರ್ಮಾನಿಸಿದೆ. ರಾಜೀನಾಮೆ ಹಾಗೂ ಚುನಾವಣೆಯ ಬೇಡಿಕೆಗಳ ಜೊತೆಗೆ ಕಲ್ಕತ್ತಾ ಶ್ರೀನಗರದ ವಿರೋಧ ಶೃಂಗ ಸಮ್ಮೇಳನಗಳು ದೇಶದ ಮುಂದಿಟ್ಟ ಒತ್ತಾಯಗಳು ಹಾಗೂ ಇಂದಿನ ಸಮಾಜಿಕ ರಾಜಕೀಯ ಪರಿಸ್ಥಿತಿಗೆ ಅನುಗುಣವಾದ ಕೆಲವು ಬೇಡಿಕೆಗಳನ್ನು ಸೇರಿಸಿ 17 ಬೇಡಿಕೆಗಳನ್ನು ಕೇಂದ್ರ ಸಮಿತಿ ರೂಪಿಸಿದೆ. ಈ 17 ಬೇಡಿಕೆಗಳನ್ನು ಆಧಾರವಾಗಿಟ್ಟುಕೊಂಡು ಜಾತ್ಯಾತೀತ ಪ್ರಜಾಸತಾತ್ಮಕ ಶಕ್ತಿಗಳ ಐಕ್ಯತೆಯನ್ನು ನಿರ್ಮಿಸಬೇಕೆಂದು ಕೇಂದ್ರ ಸಮಿತಿ ನಿರ್ಣಯಿಸಿದೆ. ರಾಜೀವ್‌ಗಾಂಧಿಯವರ ಸರ್ಕಾರದ ದುರ್ನೀತಿಗಳಿಗೆದುರಾಗಿ ಕಾಳಗದ ಕಹಳೆಮೊಳಗಿಸುತ್ತಿರುವ ಕಾಂಗ್ರೆ ಪಕ್ಷದವರನ್ನು ಕೂಡ ಈ ಐಕ್ಯರಂಗಕ್ಕೆ ಸ್ವಾಗತಿಸಲು ತಿರ್ಮಾನಿಸಲಾಗಿದೆ.

ಈ ರೀತಿ ಜಾತ್ಯಾತೀತ ಪ್ರಜಾಸತ್ತಾತ್ಮಕ ಶಕ್ತಿಗಳ ವಿಶಾಲ ಐಕ್ಯರಂಗವನ್ನು ರೂಪಿಸಿ ರಾಜೀವ್ ಗಾಂಧಿಯವರ ರಾಜೀನಾಮೆಗಾಗಿ ಚಳುವಳಿ ಹೂಡಬೇಕೆಂದು ನಿರ್ಣಯಿಸಲಾಗಿದೆ. ಇದಕ್ಕೆ ಸಂಬಂಧ ಪಟ್ಟ ಪ್ರಸ್ತಾಪವನ್ನು ಇತರ ಎಡ ಪ್ರಜಾಸತ್ತಾತ್ಮಕ ಶಕ್ತಿಗಳ ಮುಂದಿರಿಸಿ ಚರ್ಚಿಸಲು ನಿರ್ಣಯಿಸಿದೆ.

ಆಗಸ್ಟ್ 7ರಿಂದ 10 ರವರೆಗೆ ನಡೆದ ಸಿ.ಪಿ.ಐ. (ಎಂ) ಕೇಂದ್ರ ಸಮಿತಿ ಸಭೆ ಭಾರತದಆರ್ಥಿಕಪರಿಸ್ಥಿತಿಯನ್ನು ರಾಜಕೀಯ ಪರಿಸ್ಥಿತಿಯನ್ನು ಕೂಲಂಕುಶವಾಗಿ ಚರ್ಚಿಸಿದ ನಂತರ ರಾಜೀವ್ ಗಾಂಧಿಯವರ ರಾಜೀನಾಮೆಗಾಗಿ ಒತ್ತಾಯ ಮಾಡಿದೆ. ಸಿ.ಪಿ.ಐ.(ಎಂ) ಪ್ರಧಾನ ಕಾರ್ಯದರ್ಶಿ ಕಾಂ. ಇ.ಎಂ.ಎಸ್. ನಂಬೂದ್ರಿ ಪಾದ್‌ರವರು ಕೇಂದ್ರ ಸಮಿತಿಯ ಈ ತೀರ್ಮಾನವನ್ನು ಪತ್ರಿಕಾಗೋಷ್ಠಿಯಲ್ಲಿ ಬಹಿರಂಗಪಡಿಸಿದರು.

ವಿನಾಶಕಾರಕವಾದ ಆರ್ಥಿಕ ನೀತಿಗಳು, ದೇಶದ ಸಮಗ್ರತೆಗೆ ಸಂಬಂಧಿಸಿದ ಪ್ರಶ್ನೆಗಳಲ್ಲಿ ಸಂದರ್ಭ ಸಾಧಕತನ, ಶಸ್ತ್ರಾಸ್ತ್ರ ವ್ಯವಹಾರಗಳಲ್ಲಿ ನಡೆದ ಭ್ರಷ್ಟಾಚಾರ ಇವುಗಳಿಗಾಗಿ ರಾಜೀವ್ ಸರ್ಕಾರವನ್ನು ಕೇಂದ್ರ ಸಮಿತಿ ಖಂಡಿಸಿದೆ.

ರಾಜೀವ್‌ಗಾಂಧಿ ಸರಕಾರದ ರಾಜೀನಾಮೆ ಹಾಗೂ ಹೊಸ ಚುನಾವಣೆಗಾಗಿ ಪ್ರಚಾರ, ಪ್ರಕ್ಷೋಭೆ ನಡೆಸಬೇಕೆಂದು ಪಕ್ಷದ ಘಟಕಗಳಿಗೆ ಕೇಂದ್ರ ಸಮಿತಿ ಕರೆ ನೀಡಿದೆ.

17 ಬೇಡಿಕೆಗಳನ್ನು ಮುಂದಿಟ್ಟು ಜನ ಸಮುದಾಯನ್ನೊಳಗೊಂಡ ಸಂಘಟಿತ ಚಳುವಳಿ ನಡೆಸಲು ಮುಂದಾಗಬೇಕೆಂದು ಎಲ್ಲಾ ಜಾತ್ಯಾತೀತ ಪ್ರಜಾಸತ್ತಾತ್ಮಕ ಶಕ್ತಿಗಳಿಗೆ ಕೇಂದ್ರ ಸಮಿತಿ ವಿನಂತಿಸಿದೆ. ತೀವ್ರಗಾಮಿಗಳಿಗೆದುರಾಗಿ ಭೀಕರ ಹೋರಾಟ ನಡೆಸುತ್ತಿರುವ ಪಕ್ಷದ ಪಂಜಾಬ್ ಘಟಕದ ಸಹಾಯಾರ್ಥ ನಿಧಿಯನ್ನು ಆರಂಭಿಸಲು ಕೇಂದ್ರ ಸಮಿತಿ ತಿರ್ಮಾನಿಸಿದೆ.

(8ನೇ ಪುಟ ನೋಡಿ)

ಭಾರತ - ಶ್ರೀಲಂಕಾ ಒಪ್ಪಂದ

ಜುಲೈ ತಿಂಗಳ ಕೊನೆಯ ವಾರದಲ್ಲಿ ಶ್ರೀಲಂಕಾದ ತಮಿಳು ಅಲ್ಪಸಂಖ್ಯಾತರ ಸಮಸ್ಯೆಯನ್ನು ಪರಿಹರಿಸುವ ನಿಟ್ಟಿನಲ್ಲಿ ಭಾರತದ ಪ್ರಧಾನಿ ರಾಜೀವ ಗಾಂಧಿ ಮತ್ತು ಶ್ರೀಲಂಕಾದ ಅಧ್ಯಕ್ಷ ಜೆ.ಆರ್.ಜಯವರ್ಧನೆಯವರ ನಡುವೆ ಏರ್ಪಟ್ಟ ಒಪ್ಪಂದವನ್ನು ಭಾರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ)ವು ಸ್ವಾಗತಿಸಿದೆ. ಶ್ರೀಲಂಕಾ ಸರಕಾರ ಮತ್ತು ತಮಿಳು ಅಲ್ಪಸಂಖ್ಯಾತರ ನಡುವೆ ನಡೆದ ದೀರ್ಘಕಾಲದ ಮಾತುಕತೆಗಳ ಬಳಿಕ ಸಹಿ ಹಾಕಲಾದ ಈ ಒಪ್ಪಂದವು ಈ ಪುಟ್ಟದೇಶದಲ್ಲಿ ಶಾಂತಿ ನೆಲಸುವಂತೆ ಮಾಡಲು ನೆರವಾಗುವುದೆಂದೂ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷ ಭಾವಿಸುತ್ತದೆ.

ಈ ಒಪ್ಪಂದವು ಶ್ರೀಲಂಕಾ ಐಕ್ಯತೆ ಮತ್ತು ಸಮಗ್ರತೆಯನ್ನು ಕಾಪಾಡಲು ನೆರವಾಗುವುದಲ್ಲದೆ ಶ್ರೀಲಂಕೆಯು ಬಹುಜನಾಂಗೀಯ, ಬಹುಭಾಷಾ ರಾಷ್ಟ್ರವೆನ್ನುವುದನ್ನು ಮಾನ್ಯತೆ ಮಾಡಿದೆ. ಸಿಂಹಳೀಯರು, ತಮಿಳರು ಮೂರವರು ಮತ್ತುಬರ್ಗರುಗಳನ್ನೊಳಗೊಂಡಿರುವ ಶ್ರೀಲಂಕಾ ವಿವಿಧ ಜನಾಂಗಗಳ ರಾಷ್ಟ್ರ, ಭಾರತ ಶ್ರೀಲಂಕಾ ಒಪ್ಪಂದವು ಈ ಅಂಶವನ್ನು ಪರಿಗಣಿಸಿ ಸಿಂಹಳ, ತಮಿಳು ಮತ್ತು ಇಂಗ್ಲೀಷ್ ಭಾಷೆಗಳನ್ನು ಅಧಿಕೃತ ಭಾಷೆಗಳೆಂದು ಮಾನ್ಯತೆ ನೀಡಿದೆ. ಶ್ರೀಲಂಕಾದ ಉತ್ತರ ಮತ್ತುಪೂರ್ವ ಪ್ರಾಂತ್ಯಗಳು ಪಾರಂಪರಿಕವಾಗಿ ಶ್ರೀಲಂಕಾ ತಮಿಳರು ನೆಲೆಸಿರುವ ಪ್ರದೇಶಗಳೆಂದೂ ಅವರಿಗೆ ಶ್ರೀಲಂಕೆಯ ಇತರ ದೇಸೀ ಜನಾಂಗಗಳೊಡನೆ ಬಾಳಿಬದುಕುವ ಹಕ್ಕಿದೆಯೆಂಬುದನ್ನು ಈ ಒಪ್ಪಂದ ಅಂಗೀಕರಿಸಿದೆ. ಒಪ್ಪಂದವನ್ನು ಪ್ರಾಮಾಣಿಕವಾಗಿ ಅನುಷ್ಠಾನಕ್ಕೆ ತಂದರೆ ಮತ್ತು ಸಿಂಹಳೀಯರು ತಮ್ಮ ಪ್ರಾದೇಶಿಕ ಸಂಕುಚಿತವಾದನ್ನು ತಮಿಳರು ತಮ್ಮ ಪ್ರತ್ಯೇಕವಾದವನ್ನು ಬಿಟ್ಟುಕೊಟ್ಟಲ್ಲಿ ತಮ್ಮ ದೇಶದಲ್ಲೀ ಪರಕೀಯರಂತೆ ಬದುಕಿದ್ದ ತಮಿಳರು ಮುಕ್ತವಾಗಿ ಮತ್ತು ಶ್ರೀಲಂಕಾದ ಇತರ ಜೊತೆಗೆ ಸಮಾನರಾಗಿ ಬದುಕುವುದು ಸಾಧ್ಯ. ಒಪ್ಪಂದದ ಇನ್ನೊಂದು ಅಂಶದ ಪ್ರಕಾರ ಪೂರ್ವ ಪ್ರಾಂತದ ಡಿಸೆಂಬರ್ 31ರ ಒಳಗಾಗಿ ನಡೆಯಬೇಕಾಗಿರುವ ಅಭಿಮತ ಸಂಗ್ರಹದಲ್ಲಿ ತಾವು ಉತ್ತರ ಪ್ರಾಂತ್ಯದ ಜೊತೆಗೆ ವಿಲೀನರಾಗ ಬಯಸುತ್ತಾರೊ ಇಲ್ಲವೋ ಎಂಬುದನ್ನು ತಿಳಿಸಬೇಕಾಗುತ್ತದೆ . ಈವಿಲೀನಕ್ಕೆ ಅವರು ಪರವಾಗಿದ್ದರೆ. ಉತ್ತರ ಮತ್ತು ಪೂರ್ವಪ್ರಾಂತ್ಯದ ಜನರು ಬಯಸುವ ರೀತಿಯಲ್ಲಿ ಎರಡೂಪ್ರಾಂತ್ಯಗಳನ್ನು ವಿಲೀನಗೊಳಿಸಿ ಅದಕ್ಕೆ ಒಬ್ಬ ಗವರ್ನರ್ ಹಾಗೂ ಸಚಿವ ಸಂಪುಟವನ್ನೊಳಗೊಂಡಿರುವ ಪ್ರಾದೇಶಿಕಕೌನ್ಸಿಲ್ ಒಂದನ್ನು ರಚಿಸಲಾಗುವುದು. ಇದು ಕಾರ್ಯಗತವಾದರೆ ತಮಿಳು ಭಾಷೆಯನ್ನಾಡುವ ಅಲ್ಪಸಂಖ್ಯಾತರ ಹೆಚ್ಚಿನ ಆಶಯುಗಳು ಈಡೇರಿದಂತಾಗುತ್ತದೆ.

ಆದರೂ ಭಾರತ-ಶ್ರೀಲಂಕಾ ಒಪ್ಪಂದದ ದಾರಿ ಸುಗಮವಾಗಿಲ್ಲ. ಶ್ರೀಲಂಕಾ ಪ್ರಧಾನಿ ಪ್ರೇಮದಾಸ ಮತ್ತು ವಿರೋಧಪಕ್ಷದ ನಾಯಕಿ ಸಿರಿಮಾವೋ ಅವರೂ ಸೇರಿದಂತೆ ಹಲವಾರು ಪ್ರಭಾವಿಶಕ್ತಿಗಳು ಈ ಒಪ್ಪಂದಕ್ಕೆ ವಿರೋಧ ವ್ಯಕ್ತಪಡಿಸಿದ್ದಾರೆ. ಹಾಗಿದ್ದರೂ ಎರಡೂ ರಾಷ್ಟ್ರಗಳ ಸರಕಾರಗಳು ಅಂಗೀಕರಿಸಿದ ದೃಢನಿಲವು, ತಮಿಳು ಅಲ್ಪಸಂಖ್ಯಾತರು, ಅದಕ್ಕೆ ನೀಡಿದ ವ್ಯಾಪಕ ಬೆಂಬಲ ಮತ್ತು ಶ್ರೀಲಂಕಾದ ಎಡಪಕ್ಷಗಳು ನೀಡಿದಬೆಂಬಲಗಳಿಂದಾಗಿ ಒಪ್ಪಂದವನ್ನು ಜಾರಿಗೆ ತರುವುದು ಸಾಧ್ಯವಾಗಿದೆ. ಎರಡು ವರ್ಷಗಳಿಂದ ಸಂಘರ್ಷಕ್ಕೆ ತುತ್ತಾಗಿ ಅತೀವ ಬವಣೆಗೊಳಗಾಗಿದ್ದ ಶ್ರೀಲಂಕಾ ಈ ಒಪ್ಪಂದವನ್ನು ಯಶಸ್ವಿಯಾಗಿ ಜಾರಿಗೊಳಿಸಿ ಸಾಮ್ರಾಜ್ಯಶಾಹಿಗಳು ನಡೆಸುತ್ತಿದ್ದ ಪಿತೂರಿಗೆ ಸೋಲುಂಟು ಮಾಡಬೇಕು. ಇದರಿಂದ ಶ್ರೀಲಂಕೆಗೂ ಒಳಿತು. ಭಾರತದ ಸುಭದ್ರತೆಗೂ ಅದು ಅನುಕೂಲ.

ಸ್ವತಂತ್ರ ಭಾರತದ ನಲ್ವತ್ತು ವರ್ಷಗಳು

ಮೂಲಭೂತ ಜನಸಮೂಹಗಳ ಬೆಳೆಯುತ್ತಿರುವ ಹೋರಾಟಗಳು ಮಾತ್ರವೇ ಜನತೆಯ ಪರವಾದ, ದೇಶದ ಐಕ್ಯತೆಯಪರವಾದ ಒಂದು ಹೊಸ ತೀವ್ರಗಾಮಿ ಪರ್ಯಾಯದ ಆಸೆಯನ್ನು ಭರವಸೆಯನ್ನು ಹೆಚ್ಚಿಸುತ್ತವೆ ಎನ್ನುತ್ತಾರೆ, ಕಾ.ಬಿ.ಟಿ.ಆರ್. ಸ್ವಾತಂತ್ರ್ಯ ನಂತರದ ನಲ್ವತ್ತು ವರ್ಷಗಳ ಒಳ್ಳೆಯ ಮತ್ತು ಕೆಟ್ಟ ಅಂಶಗಳನ್ನು ವಿಶ್ಲೇಷಿಸುತ್ತಾರೆ ಈ ಲೇಖನದಲ್ಲಿ.

ಭಾರತದ ಸ್ವಾತಂತ್ರ್ಯಗಳಿಕೆ ಜಗತ್ತನ್ನು ನಡುಗಿಸಿದ ಒಂದು ಘಟನೆ. ಜಾಗತಿಕ ವಸಾಹತುಶಾಹೀದಬ್ಬಾಳಿಕೆಗೆ ಅದೊಂದು ದೊಡ್ಡ ಆಘಾತ ನೀಡಿತು. ಆದರೆಭಾರತದ ಸ್ವಾತಂತ್ರ್ಯದ ದುರಂತವೆಂದರೆ ಜನಸಾಮಾನ್ಯರು ಒಂದು ಉತ್ತಮ ಜಗತ್ತಿನ ಭಾವನೆಯಿಂದ ಹೋರಾಡಿದರೂ, ಆಂದೋಲನದ ಮುಖಂಡತ್ವದಲ್ಲಿದ್ದವರ ಕಣ್ಣೋಟ ಒಂದು ಆಧುನಿಕ ಬಂಡವಾಳಶಾಹೀ ವ್ಯವಸ್ಥೆಯ ಸ್ಥಾಪನೆಯಾಚೆಗೆ ಹರಿಯಲಿಲ್ಲ. ಆದ್ದರಿಂದ ಭಾರತದ ಪರಿಸ್ಥಿತಿ ಚೀಣಾದಲ್ಲಿನ ಪರಿಸ್ಥಿತಿಗಿಂತ ಭಿನ್ನವಾಯಿತು. ಅಲ್ಲಿ ಬಡತನ ಹಾಗೂ ಹಿಂದುಳಿಕೆಯ ವಿರುದ್ಧ ಸಮರ ಸಾರಲು ಸಾಧ್ಯವಾಯಿತು.

ನಲ್ವತ್ತುವರ್ಷಗಳ ನಂತರದ ಪರಿಸ್ಥಿತಿಯನ್ನು ಅರ್ಥಮಾಡಿಕೊಳ್ಳಬೇಕೆಂದರೆ ನಾವುಎಲ್ಲಾ ಸಕಾರಾತ್ಮಕ ಮತ್ತು ನಕಾರಾತ್ಮಕ ಅಂಶಗಳನ್ನು, ಅಥವಾ ಒಳ್ಳೆಯ ಮತ್ತು ಕೆಟ್ಟ ಅಂಶಗಳನ್ನು ಪರಿಶೀಲಿಸ ಬೇಕಾಗುತ್ತದೆ. ಭಾರತದ ಸ್ವಾತಂತ್ರ್ಯವನ್ನು, ಸ್ವತಂತ್ರ ವಿದೇಶಾಂಗ ನೀತಿಯನ್ನು ರಾಷ್ಟ್ರೀಯ ಯೋಜನೆ ಹಾಗೂ ಪ್ರಮುಖ ಕೈಗಾರಿಕೆಗಳ ಬೆಳವಣಿಗೆಯನ್ನು ಮುಖ್ಯವಾಗಿ ಸಮಾಜವಾದೀ ದೇಶಗಳ ನೆರವಿನಿಂದ ಉಳಿಸಿಕೊಂಡಿರುವುದು, ಸಮಾಜವಾದೀ ದೇಶಗಳೊಂದಿಗೆ ಮಿತ್ರತ್ವ, ಸಂಸದೀಯ ವ್ಯವಸ್ಥೆ, ವಯಸ್ಕಮತದಾನ, ಚುನಾವಣೆಗಳು ವಿರೋಧಪಕ್ಷಗಳ ಅಸ್ತಿತ್ವ ಮತ್ತು ಯಾವುದೇ ಮಿಲಿಟರಿಕೂಟವನ್ನು ಸೇರಲು ನಿರಾಕರಿಸಿರುವುದು, ಈ ನಲ್ವತ್ತುವರ್ಷಗಳ ಸಕಾರಾತ್ಮಕ ಸಂಗತಿಗಳು.

ಈ ಉತ್ತಮ ಅಂಶಗಳು ಇತರ ನವ ವಿಮೋಚಿತ ದೇಶಗಳೊಂದಿಗೆ ಮುಖ್ಯವಾಗಿ ನಮ್ಮ ನೆರೆದೇಶಗಳಲ್ಲಿನ ಪರಿಸ್ಥಿತಿಗಳಿಗೆ ಹೋಲಿಸಿದಾಗ ನಿಖರವಾಗಿ ಕಾಣುತ್ತವೆ. ಹಲವು ದೇಶಗಳು ತಮ್ಮ ಆರ್ಥಿಕ ಮತ್ತು ರಾಜಕೀಯ ಸ್ವಾತಂತ್ರ್ಯಕಳೆದುಕೊಂಡು ಸಾಮ್ರಾಜ್ಯ

[8ನೇ ಪುಟ ನೋಡಿ]

ಪ್ರಗತಿಶೀಲ ಸಾಹಿತ್ಯದ ಐವತ್ತು ವರುಷಗಳು

ಕರ್ನಾಟಕ ಪ್ರಗತಿಪರ ಕಲಾರಂಗದ ಆಶ್ರಯದಲ್ಲಿ ಆಗಸ್ಟ್ 2ರಂದು ಬೆಂಗಳೂರಿನ ಪುರಭವನದಲ್ಲಿ "ಪ್ರಗತಿ ಶೀಲ ಚಳುವಳಿಯ 50ವರ್ಷಗಳು" ಎಂಬ ವಿಚಾರ ಸಂಕಿರಣ ನಡೆಸಲಾಗಿತ್ತು. ದಕ್ಷಿಣ ಭಾರತದ ಎಲ್ಲಾ ಭಾಷೆಗಳಲ್ಲಿನ ಪ್ರಗತಿ ಶೀಲ ಪರಂಪರೆಯ ಬಗ್ಗೆ ಈ ವಿಚಾರ ಸಂಕಿರಣ ವಿಮರ್ಶಿಸಿತು.

ಸಭೆಯ ಅಧ್ಯಕ್ಷತೆ ವಹಿಸಿದ್ದ ಕಾ॥ ನಿರಂಜನ್‌ರವರು ಪ್ರಗತಿಶೀಲ ಸಾಹಿತ್ಯ ಚಳುವಳಿಯು ಪ. ಬಂಗಾಲ ಮತ್ತು ಆಂಧ್ರದಿಂದ ಬೆಳೆದು ಬಂದು ಕರ್ನಾಟಕದಲ್ಲಿ ಹಬ್ಬಿದ ರೀತಿ ಸೋವಿಯೆತ್ ಸಾಹಿತ್ಯ ಬೀರಿದ ಪ್ರಭಾವದ ಕುರಿತು ಮಾತನಾಡಿದರು. ಈ ಚಳುವಳಿ ವಿವಿಧ ರೂಪಗಳನ್ನು ತಳೆದು ಹೊಸ ಜನಾಂಗಕ್ಕೆ ಸ್ಫೂರ್ತಿ ನೀಡಿದ ಬಗ್ಗೆ ವಿವರಿಸಿದರು.

ಮಲೆಯಾಳಿ ಸಾಹಿತ್ಯದ ಉತ್ತಮ ವಿಮರ್ಶಕರಲ್ಲೊಬ್ಬರಾದ ಪ್ರೊ॥ಹಮೀದ ರವರು 1936ರಲ್ಲಿ ಯೂರೋಪಿನಲ್ಲಿ ಬೆಳೆಯುತ್ತಿದ್ದ ಫ್ಯಾಸಿಸ್ಟ್‌ಶಕ್ತಿಗಳಿಗೆ ವಿರುದ್ಧವಾಗಿ ಪ್ರಗತಿಪರ ಬರಹಗಾರರಲ್ಲಿ ಪ್ರತಿಭಟನೆಯ ಅಲೆ ಮೂಡಿದ್ದನ್ನು ಈ ಅಲೆ ತೆರೆತೆರೆಯಾಗಿ ಭಾರತವನ್ನು ತಲುಪಿದ್ದನ್ನು ವಿವರಿಸಿದರು.

1936ರಲ್ಲಿ ಲಖನೌದಲ್ಲಿ ಸೇರಿದ ಪ್ರಗತಿಶೀಲ ಸಾಹಿತಿಗಳ ಸಮ್ಮೇಳನ ಅಂದಿನ ಭಾರತದ ಸಾಹಿತ್ಯಕ್ಕೆ ಹೊಸ ತಿರುವು ನೀಡಿತೆಂದರು. ನಮ್ಮ ಸಂವಿಧಾನದಲ್ಲಿ ಭರವಸೆ ನೀಡಲಾಗಿರುವ ಶಿಕ್ಷಣದ ಸೌಲಭ್ಯ ಕಾರ್ಯಗತವಾಗಿದ್ದರೆ ಹೆಚ್ಚು ಕೃತಿಗಳು ಹೊರಬರುತ್ತಿದ್ದುದು ಮಾತ್ರವಲ್ಲ ಹೆಚ್ಚು ಜನ ಸಾಮಾನ್ಯರು ಸಾಹಿತ್ಯವನ್ನು ಓದಲು ಅವಕಾಶವಾಗುತ್ತಿತ್ತು ಎಂದರು. ಕೇರಳದ ಪ್ರಗತಿಪರ

ಸಾಂಸ್ಕೃತಿಕ ರಂಗ

ಕಲೆ ಮತ್ತು ಲೇಖಕರ ಸಂಘ ಜನತೆಯ ನಡುವೆ ಕೆಲಸ ಮಾಡುತ್ತಾ ಸಾಧಿಸಿದ ಯಶಸ್ಸಿನ ವಿವರಣೆ ನೀಡಿದರು. ಕರ್ನಾಟಕದಲ್ಲಿಪ್ರಗತಿಶೀಲಚಳುವಳಿಬೆಳೆದು ಬಂದ ದಾರಿಕುರಿತು ಆರ್‌ಕೆ. ಮಣಿಪಾಲರು ಪ್ರಗತಿಶೀಲ ಚಳುವಳಿ ಜನ ಸಮುದಾಯದ ಆಶಯಎತ್ತಿ ಹಿಡಿದು, ಫಾಸಿಸ್ಟ್ ನೀತಿ ವಿರೋಧಿ, ಅಮೂರ್ತ ಆದರ್ಶ ವಾದಕ್ಕೆ ಪ್ರತಿಯಾಗಿ ಅನಕೃ, ನಿರಂಜನ, ಬ.ಕ. ಮುಂತಾದವರ ಕೃತಿಗಳು ಹುಟ್ಟಿಕೊಂಡಿದ್ದು ಎಂದರು ಈ ಕೃತಿಗಳನ್ನು ವಿಮರ್ಶಿಸಿದಾಗ ಸಮತೋಲನವಿಲ್ಲದ ತನ್ಮಯ ದೃಷ್ಟಿ, ತಾತ್ವಿಕ ನೆಲೆಗಟ್ಟಿಯಾಗಿಲ್ಲದುದು, ಘೋಷಣೆ ನೀಡುವುದು ಪ್ರಗತಿಶೀಲರ ಕೃತಿಗಳಲ್ಲಿ ಕಾಣಿಸಿಕೊಂಡಿತು. ಪ್ರಗತಿಶೀಲರಲ್ಲಿ ಹೆಚ್ಚು ಕಲಾತ್ಮಕತೆ ಪ್ರಬುದ್ಧತೆ ಪಡೆದ ನಿರಂಜನರ ಕೃತಿಗಳಾದ ಚಿರಸ್ಮರಣೆ, ವಿಮೋಚನೆ, ಮೃತ್ಯುಂಜಯ ಮುಂತಾದ ವರ್ಗಸಂಘರ್ಷದ ಕೃತಿಗಳು ಹೊರಬಂದವು. ಹಿಂದಿ ಸಾಹಿತ್ಯದಲ್ಲಿ ಆದಷ್ಟು ಪ್ರಗತಿ ಕನ್ನಡದಲ್ಲಿ ಆಗಲಿಲ್ಲ. ಈ ಪ್ರಗತಿಶೀಲ ಚಳುವಳಿ ಕೇವಲ ಒಂದು ದಶಕದಲ್ಲಿ ಸ್ತಬ್ಧವಾಯಿತು.

ತಿರುಪುರ ಸ್ವಾಮಿಯವರು ತಮಿಳು ಸಾಹಿತ್ಯದ ಬಗ್ಗೆ ಮಾತನಾಡುತ್ತಾ ಅರಸರ ಅಂತಃಪುರ ಕೃತಿಗಳು ಹೆಚ್ಚಾಗಿ ಪ್ರೇಮದ ಕುರಿತು ಇರುತ್ತಿದ್ದವು. ಅರಸರ ದರೋಡೆ, ಭಕ್ತಿ ಗೀತೆಗಳು ದೇವರಬಗ್ಗೆ ಇರುತ್ತಿದ್ದವು. ಮಹಾಕವಿ ಭಾರತಿ ಅದು ಮುಖ್ಯವಾದ ಒಂದು ಕಾಲವೆಂದು ಹೇಳುತ್ತಾ ಆ ಕಾಲದಲ್ಲಿ ಸಾಹಿತ್ಯ ಕ್ಷೇತ್ರದಲ್ಲಿ ಅದರಲ್ಲೂ ಸೋವಿಯೆತ್ ಸಾಹಿತ್ಯದ ಅನೇಕ ಕೃತಿಗಳು ತಮಿಳಿಗೆ ಅನುವಾದ ಗೊಂಡು ಜನತೆ ಮೇಲೆ ವಿಶಿಷ್ಟ ಪ್ರಭಾವ ಬೀರಿದವು. ಇದರಿಂದ ತಮಿಳು ಸಾಹಿತ್ಯಕ್ಕೆ ಹೊಸ ರಕ್ತ ಸೃಷ್ಟಿಯಾಯಿತು. ಜಾನಕಿರಾಂರವರ ಹೆಸರುವಾಸಿ 'ಪುಳಿಯ ಮರತ್ತಿಲೆ ಕರ್ನೈ' ಪರಂಪರೆಯ ಹೊಸ ಜೀವನದ ಸಂಕೇತ ಎಂದು ವಿವರಿಸಿದರು.

ಪ್ರೊ॥ ನಾಗಭೂಷಣರವರು ತೆಲುಗು ಸಾಹಿತ್ಯದಲ್ಲಿ ಮೊದಲು ಭಾವ ಕವಿತೆ, ಪ್ರಕೃತಿ ಕವಿತೆಯಿಂದ ಪ್ರಾರಂಭವಾದ ಕೃತಿಗಳು ನಂತರ ಸುಧಾರಣವಾದ ಚಳುವಳಿಗಳ ಪ್ರಭಾವದಿಂದಾಗಿ, ತೆಲಂಗಾಣ ಹೋರಾಟದ ಸಂದರ್ಭದಲ್ಲಿ ಶ್ರೀಶ್ರೀಯವರಂತ ಕವಿಗಳು ಜನತೆಯ ನಡುವೆ ಬದುಕಿ ಅವರ ಜೀವನದ ಎಲ್ಲಾ ರಂಗಗಳ ಬಗ್ಗೆ ರಚಿಸಿದ ಕೃತಿಗಳು ಹೆಚ್ಚುಪ್ರಭಾವ ಬೀರಿದವು ಎಂದು ವಿವರಿಸಿದರು.

ಕೊನೆಯಲ್ಲಿ ಸಿ.ಪಿ.ಎ. ಸಿ ಕಾರ್ಯದರ್ಶಿ ಕಾ॥ವಾರಿಯರ್ ವಂದಿಸಿದರು. ಈ ವಿಚಾರ ಸಂಕಿರಣವನ್ನು ಏರ್ಪಡಿಸಿದ ಕರ್ನಾಟಕ ಪ್ರಗತಿಪರ ಕಲಾರಂಗ ಅಭಿನಂದನಾರ್ಹರು.

ಕನ್ನಡದಲ್ಲಿ"ಕತ್ತೆ ಮತ್ತು ಧರ್ಮ" ಎಂಬ ಮಕ್ಕಳ ನಾಟಕವನ್ನು ಹಾಗೆಯೇ "ಕಣಲಾಟಾಂ" ಎಂಬ ಜಮೀನುದಾರಿ ಶೋಷಣೆ ಹಾಗೂ ಅದರಲ್ಲಿ ಧರ್ಮದ ಪಾತ್ರ ಮತ್ತು ಅದರ ವಿರುದ್ಧದ ಪ್ರತಿಭಟನೆಯನ್ನು ಚಿತ್ರಿಸುವ ಮಲೆಯಾಳಿ ನಾಟಕವನ್ನು ಪ್ರದರ್ಶಿಸಿದರು.

ವರದಿ : ಕೆ. ಶಾಂತಕುಮಾರಿ

"ನಾ ಕಂಡ ರಶ್ಯ"

ಒಂದಿರುಳ
ಕನಸಿನಲಿ
ನಾ ಕಂಡ ರಶ್ಯ
ಸುಖದ
ಸೋಪಾನದಂತೆ,
ಅಂತಃ ಕರಣದ
ಗೆಳೆಯನಂತೆ,
ಮೇಲು ನುಡಿಯ
ನಲ್ಲೆಯಂತೆ

ಹಾದಿ ಬೀದಿಯ
ಇತಿಹಾಸದ
ಕಟ್ಟಡಗಳು
ಪಿಸು ನುಡಿಯುತ್ತಿದ್ದವು
ಲೆನಿನ್ ! ಲೆನಿನ್ ! ಲೆನಿನ್ !
ಹಚ್ಚ ಹಸುರಿನ
ಮಂಜು ಪೂರಿತ
ಪ್ರಕೃತಿ
ಬೀರುತ್ತಿತ್ತು ಸಂದೇಶ
'ಸೌಮ್ಯ ವಾದಕ್ಕೆ
ನಮ್ಮಯ ಶುಕ್ರಿಯಾ'

ಶುಭ್ರ ಜ್ಯೋತ್ಸ್ನ
ಪೂರಿತ
ಜಲರಾಶಿ
ತಿಳಿಸಿತೆನಗೆ
"ನೆನಪಿಡು
ಮಾರ್ಕ್ಸ್‌ವಾದ
ಎಂದೂ ಚಿರಾಯು"

ಶೀತಲ ಗಾಳಿ
ವಿಶ್ವಶಾಂತಿಗೆ
ಶುಭವ ಕೋರುತ
ಎಳೆ ತಂದಿತ್ತೆನ್ನ
ಶ್ರಮಿಕರ
ಸ್ವರ್ಗದಿಂದ,
ಸ್ವಪ್ನ ಲೋಕದಿಂದ.

— ನಾಗೇಶ್

ಅಖಿಲ ಭಾರತ ಪಿಕೆಟಿಂಗ್‌ಗೆ ಸಿದ್ಧಗೊಳ್ಳುತ್ತಿರುವ ರೈತ ಸಂಘ

ಬಿಜಾಪುರ

ಕೃಷ್ಣ ಎಡದಂಡೆ ಮತ್ತು ಬಲದಂಡೆ ಯೋಜನೆಯಲ್ಲಿ ನಡೆಯುತ್ತಿರುವ ಭ್ರಷ್ಟಾಚಾರ ಮತ್ತು ವಿಳಂಬ ನೀತಿಯನ್ನು ಪ್ರತಿಭಟಿಸಿ ಬಿಜಾಪುರದಲ್ಲಿ ಆಗಸ್ಟ್ 4 ರಂದು ರೈತಸಂಘದ ವತಿಯಿಂದ ಬೃಹತ್ ಕಾಲ್ನಡೆ ಜಾಥಾ ಪ್ರಾರಂಭವಾಯಿತು, ಬಿಜಾಪುರದಿಂದ ಭೀಮರಾಯನ ಗುಡಿಯವರೆಗೆ ಕಾಲ್ನಡಿಗೆಯಲ್ಲಿ ಸಾಗುವ ರೈತ ಕಾರ್ಯಕರ್ತರು ಹಾದಿಯ ನಡುವೆ ಸಿಗುವ ಪ್ರತಿ ಹಳ್ಳಿಯಲ್ಲೂ ಭಾಷಣ ಮತ್ತು ಕ್ರಾಂತಿಗೀತೆಗಳ ಕಾರ್ಯಕ್ರಮಗಳನ್ನು ನೀಡಿ ಕೃಷ್ಣಾ ಮೇಲ್ದಂಡೆ ಯೋಜನೆಯಲ್ಲಿ ನಡೆಯುತ್ತಿರುವ ಭ್ರಷ್ಟಾಚಾರಗಳನ್ನು ವಿವರಿಸಿ ಸರ್ಕಾರದ ಬಂಡವಾಳಶಾಹಿ ಭೂಮಾಲಕ ಪರ ನೀತಿಯ ಬಗ್ಗೆ ರೈತ ಸಮೂಹವನ್ನು ಜಾಗ್ರತಗೊಳಿಸಿ ಅವರನ್ನು ಹೋರಾಟಕ್ಕೆ ಅಣಿಗೊಳಿಸುವ ಪ್ರಯತ್ನವನ್ನು ಕೈಗೆತ್ತಿಕೊಂಡಿತು.

ರೈತರ ಈ ಐತಿಹಾಸಿಕ ಜಾಥಾದ ಉದ್ಘಾಟನೆಯನ್ನು ಬಿಜಾಪುರ ಜಿಲ್ಲಾ ರೈತ ಮುಖಂಡರಾದ ಕಾ॥ಆರ್.ಎಚ್ ಕಲಾದಗಿ ನೆರವೇರಿಸಿದರು. ಜಿಲ್ಲಾ ರೈತ ಸಂಘದ ಅಧ್ಯಕ್ಷರಾದ ಕಾ॥ ಭೀಮಸಿ ಕಲಾದಗಿ ಅಧ್ಯಕ್ಷತೆ ವಹಿಸಿದ್ದರು, ಎಸ್ ಎಫ್. ಐ., ಡಿ. ವೈ. ಎಫ್. ಐ ಸಂಗಾತಿಗಳು ಜಾಥಾಕ್ಕೆ ಶುಭಕೋರಿ ಮಾತನಾಡಿದರು. ಜಾಥಾದ ನಾಯಕತ್ವವನ್ನು ಸಂಗಾತಿಗಳಾದ ಅಣ್ಣಾರಾಯ ಈಳಗೇರ, ಹೊನ್ನಟಗಿ ಬಸವಂತಪ್ಪ ಕುಲ್ಲೊಳ್ಳಿ, ಅಮೀನಸಾಬ ಚಬನೂರ ವಹಿಸಿದ್ದರು.

ಹಾನಗಲ್

ಕರ್ನಾಟಕ ಪ್ರಾಂತ ರೈತ ಸಂಘದ ಹಾನಗಲ್ ತಾಲೂಕು ರೈತ ಪ್ರತಿನಿಧಿಗಳ ಸಭೆ ಆಗಸ್ಟ್ 5 ರಂದು ನಡೆಯಿತು. ತಾಲೂಕಿನ ವಿವಿಧ ಭಾಗಗಳಿಂದ 116 ಪ್ರತಿನಿಧಿಗಳು ಭಾಗವಹಿಸಿದ್ದರು. ಸಭೆಯು ವಿವಿಧ ರೈತಸಮಸ್ಯೆಗಳ ಬಗ್ಗೆ ಚರ್ಚೆ ನಡೆಸಿತು. ಇಡೀ ತಾಲೂಕಿನಲ್ಲಿ ಸಾಕಷ್ಟು ಮಳೆಬಿದ್ದಿಲ್ಲವಾದ್ದರಿಂದ ಉಂಟಾಗಿರುವ ತೊಂದರೆಯ ಬಗ್ಗೆ ಪರಿಶೀಲಿಸಿತು. ತಾಲೂಕಿನ ವರದಾನದಿಗೆ ಅಲ್ಲಲ್ಲಿ ಯಾತ ನೀರಾವರಿ ಮಾಡಬೇಕು. ಬನವಾಸಿಯ ಹತ್ತಿರ ಒಡ್ಡು ನಿರ್ಮಿಸಿ ಹೆಚ್ಚಿನ ಭೂಮಿಯನ್ನು ನೀರಾವರಿಗೊಳಪಡಿಸಬೇಕು. ಮುಂತಾದ ಬೇಡಿಕೆಗಳನ್ನು ಈ ಹಿಂದೆ ಅನೇಕ ಬಾರಿ ಸರ್ಕಾರದ ಮುಂದಿಟ್ಟಿದ್ದರೂ ಕೂಡ ಸರ್ಕಾರ ಯಾವುದೇ ಕ್ರಮ ಕೈಗೊಂಡಿಲ್ಲದಿರುವುದನ್ನು ಸಭೆ ಖಂಡಿಸಿತು. ಸೆಪ್ಟಂಬರ್‌ನಲ್ಲಿ ದೇಶಾದ್ಯಂತ ರೈತರ ಬೇಡಿಕೆಗಳ ಬಗ್ಗೆ ಚಳುವಳಿ ನಡೆಸಬೇಕೆಂಬ ಕಿಸಾನ್ ಸಭಾದ ಕರೆಯನ್ನು ಯಶ್ವಸಿಗೊಳಿಸಿ ರೈತರನ್ನು ಸಾವಿರ ಸಂಖ್ಯೆಯಲ್ಲಿ ಜೈಲು ತುಂಬಿಸುವ ತೀರ್ಮಾನವನ್ನು ಸಭೆ ಕೈಗೊಂಡಿತು.

ಚಿಕ್ಕುಂಬಿ

ಅಖಿಲ ಭಾರತದ ಕೃಷಿ ಕಾರ್ಮಿಕ ಸಂಘಟನೆಯ ಚಿಕ್ಕುಂಬಿ ಘಟಕವು ಆಗಸ್ಟ್ 7 ರಂದು ಬಡ ರೈತ ಕೃಷಿ ಕೂಲಿಕಾರರಿಗೆ ಬ್ಯಾಂಕುಗಳ ಮೂಲಕ ಸಾಲ ವಿತರಣೆ ಮಾಡಬೇಕೆಂದು ಒತ್ತಾಯಿಸಿ ಜಾಥಾ ಸಂಘಟಿಸಿತು. ಚಿಕ್ಕುಂಬಿಯಿಂದ ಉಗರಗೋಳಕ್ಕೆ 8 ಕಿ.ಮೀ ದೂರದ ಜಾಥಾದಲ್ಲಿ 200 ಮಂದಿ ಪಾಲ್ಗೊಂಡಿದ್ದರು. ಕಾ॥ ಪರ್ವತಗೌಡ ಕಾ॥ಬಿ.ಬಿ.ತೋರಗಲ್, ಕಾ॥ಎಲ್. ಎಸ್. ನಾಯಕ್ ಜಾಥಾದ ನೇತೃತ್ವ ವಹಿಸಿದ್ದರು. ನಂತರ ಉಗರಗೋಳದ ಗ್ರಾಮೀಣ ಬ್ಯಾಂಕ್ ವ್ಯವಸ್ಥಾಪಕರಿಗೆ ಮನವಿ ಸಲ್ಲಿಸಲಾಯಿತು.

ಮಾನ್ವಿ

ಮಾನ್ವಿ ತಾಲೂಕಿನಲ್ಲಿರುವ ಅರಣ್ಯ ಭೂಮಿ, ಗೈರಾಣಿ, ಬೀಳು ಭೂಮಿಗಳನ್ನು ಕೃಷಿಕೂಲಿಕಾರರಿಗೆ ಹಂಚಬೇಕೆಂದು ರೈತಸಂಘ ಒಂದು ವರ್ಷದಿಂದ ಹೋರಾಟನಡೆಸಿದ್ದರೂ ಜಿಲ್ಲೆಯ ಅಧಿಕಾರಿಗಳು ನಿರ್ಲಕ್ಷ್ಯ ವಹಿಸಿದ್ದರು. ಈಗ ಮಂತ್ರಾಲಯ ಸ್ವಾಮಿಯ ಭೂಮಿಯನ್ನು ಹರನಳ್ಳಿ ಗ್ರಾಮದ ಕೃಷಿಕೂಲಿಕಾರರಿಗೆ ಹಂಚಬೇಕೆಂದು ಟ್ರಿಬ್ಯೂನಲ್ಲಿಗೆ ಅರ್ಜಿಸಲ್ಲಿಸಲಾಗಿದ್ದು ಭೂನ್ಯಾಯ ಮಂಡಲಿ ಈ ವಿಷಯದಲ್ಲಿ ಅವ್ಯವಹಾರ ನಡೆಸಿ ಸಾಗುವಳಿ ಮಾಡದವರ ಪರವಾಗಿ ತೀರ್ಪು ನೀಡಿದೆ. ಇದನ್ನು ಪ್ರತಿಭಟಿಸಿ ಆಗಸ್ಟ್ 2ರಂದು ತಹಸೀಲ್ದಾರರಿಗೆ ಮನವಿ ಪತ್ರ ನೀಡಲಾಗಿದೆ. ಈ ಬಗ್ಗೆ ಕ್ರಮಕೈಗೊಳ್ಳದಿದ್ದಲ್ಲಿ ಉಗ್ರ ಹೋರಾಟ ನಡೆಸುವುದಾಗಿ ರೈತ ಸಂಘದ ತಾಲೂಕು ಸಮಿತಿ ಕಾರ್ಯದರ್ಶಿ ಡಾ॥ಬಾಲಚಂದ್ರ ಹೇಳಿಕೆಯಲ್ಲಿ ತಿಳಿಸಿದ್ದಾರೆ.

ತಳವಗೇರಾ

ರಾಯಚೂರುಜಿಲ್ಲೆಯ ತಳವಗೇರಾ ಮಂಡಲದ 12 ಹಳ್ಳಿಗಳಿಂದ 400 ರೈತ ಕೃಷಿಕಾರ್ಮಿಕರು ಆಗಸ್ಟ್ 3 ರಂದು ಸ್ಥಳೀಯ ಬೇಡಿಕೆಗಳನ್ನು ಈಡೇರಿಸಲು ಒತ್ತಾಯಿಸಿ ಕಾಲ್ನಡಿಗೆ ಜಾಥಾ ಕಾರ್ಯಕ್ರಮವನ್ನು ನಡೆಸಿದರು. ಮಂಡಲ ಕಾರ್ಯದರ್ಶಿಗೆ ಮನವಿ ಪತ್ರವನ್ನು ಸಲ್ಲಿಸಲಾಯಿತು. ನಂತರ ನಡೆದ ಸಭೆಯಲ್ಲಿ AIKS ಕರೆ ನೀಡಿರುವ ಸೆಪ್ಟಂಬರ್ ಚಳುವಳಿಯಲ್ಲಿ ರೈತ ಸಂಘ ಸಕ್ರಿಯವಾಗಿ ಭಾಗವಹಿಸಿ ಯಶಸ್ವಿಗೊಳಿಸಬೇಕೆಂದು ತೀರ್ಮಾನಿಸಲಾಯಿತು. ಕುಷ್ಟಗಿ ತಾಲೂಕಿನ ಎಲ್ಲಾ ಮಂಡಲಗಳಲ್ಲೂ ಕಾಲ್ನಡಿಗೆ ಜಾಥಾ ಸಂಘಟಿಸಿ ಸೆಪ್ಟೆಂಬರ್ ಚಳುವಳಿಗೆ ರೈತರನ್ನು ಸಜ್ಜುಗೊಳಿಸುವಲ್ಲಿ ರೈತ ಸಂಘ ನಿರತವಾಗಿದೆ.

ಕುಂದಾಪುರ

ಕಂಡ್ಲೂರು, ಕಾವ್ರಾಡಿ ಪ್ರದೇಶದ ರೈತ ಕೃಷಿಕೂಲಿಕಾರರ ಸಭೆ ಆಗಸ್ಟ್ 6 ರಂದು ನಡೆದು ಸೆಪ್ಟಂಬರ್ 8ರಂದು ತಾಲೂಕು ತಹಸೀಲ್ದಾರ್ ಕಚೇರಿಯೆದುರು ಪಿಕೆಟಿಂಗ್ ನಡೆಸಲು ತೀರ್ಮಾನಿಸಿತು. ಗ್ರಾಮದ ರೈತರ ಬೇಡಿಕೆಗಳಾದ ಕುಬ್ಜ ನದಿ ಅಣೆಕಟ್ಟು ದುರಸ್ತಿ, ಕೆರೆಗಳ ಹೂಳೆತ್ತುವಿಕೆ ಮತ್ತು ನೂತನವಾಗಿ ನಿರ್ಮಾಣವಾಗುತ್ತಿರುವ ಮರವಾಸಿ ರಸ್ತೆಗೆ ಭೂಮಿಯನ್ನು ಬಿಟ್ಟುಕೊಟ್ಟು ರೈತರಿಗೆ ಕೂಡಲೇ ಪರಿಹಾರ ಒದಗಿಸಲು ಮಂಡಲ ಪಂಚಾಯಿತಿ ಜಿಲ್ಲಾ ಪರಿಷತ್ತು ಸಭೆ ಒತ್ತಾಯಿಸಿತು. ಕಾ॥ವೆಂಕಟೇಶರೋಣಿ ಕಾ॥ಯು.ದಾಸ ಭಂಡಾರಿ ಸಭೆಯನ್ನುದ್ದೇಶಿಸಿ ಮಾತನಾಡಿ ಸೆಪ್ಟಂಬರ್ 7ರಿಂದ 13 ರವರೆಗೆ ದೇಶಾದ್ಯಂತ ನಡೆಯಲಿರುವ ರೈತರ ಚಳುವಳಿಯನ್ನು ಯಶಸ್ವಿಗೊಳಿಸಬೇಕೆಂದು ಕರೆ ನೀಡಿದರು.

ಮುದೂರು

ಆಗಸ್ಟ್ 2 ರಂದು ಕುಂದಾಪುರ ತಾಲೂಕಿನ ಮುದೂರಿನಲ್ಲಿ ರೈತರ ಸಭೆ ನಡೆದು ಸೆಪ್ಟಂಬರ್ 8 ರಂದು ನಡೆಯುವ ರೈತರ ಪಿಕೆಟಿಂಗ್‌ನಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳಲು ನಿರ್ಧರಿಸಲಾಯಿತು. ಮುದೂರು ಪ್ರದೇಶದಲ್ಲಿ ಶೇ .75 ಮಂದಿ ಮಲಯಾಳಂ ಮಾತನಾಡುವವರಿದ್ದು ಗ್ರಾಮದ ಶಾಲೆಗೆ ಮಲಯಾಳಂ ಅಧ್ಯಾಪಕರನ್ನು ನೇಮಕ ಮಾಡುವಂತೆ ಸಭೆಯು ಜಿಲ್ಲಾ ಪರಿಷತ್ತನ್ನು ಒತ್ತಾಯಿಸಿತು. ಗ್ರಾಮದ ಇನ್ನಿತರ ಸಮಸ್ಯೆಗಳನ್ನು ಕೂಡಲೇ ಪರಿಹರಿಸಬೇಕೆಂದು ಮಂಡಲ ಪಂಚಾಯತ ಮತ್ತು ಸಂಬಂಧಿಸಿದ ಅಧಿಕಾರಿಗಳನ್ನು ಒತ್ತಾಯಿಸಿತು. ಕಾ॥ಪಿ.ಪಿ ಜಾರ್ಜ್,ಕಾ॥ದಾಸಭಂಡಾರಿ ಮುಂತಾದವರು. ಸಭೆಯನ್ನುದ್ದೇಶಿಸಿ ಮಾತನಾಡಿದರು.

ನಮ್ಮ ದೇಶದ ಪ್ರಜಾಸತ್ತಾತ್ಮಕ ಮುನ್ನಡೆಗಾಗಿ ಹೋರಾಡುವ ಭಾರತ ಕಮುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ರಾಷ್ಟ್ರೀಯ ಸ್ವಾತಂತ್ರ, ಪ್ರಜಾಪ್ರಭುತ್ವ, ಸಮಾಜವಾದ ಮತ್ತು ಶಾಂತಿಗಾಗಿ ನಡೆಯುವ ಲೋಕವ್ಯಾಪಿ ಹೋರಾಟದಲ್ಲಿ ತನ್ನ ಪಾತ್ರವನ್ನು ವಹಿಸಿರುತ್ತದೆ.

—ಪಕ್ಷದ ಕಾರ್ಯಕ್ರಮದಿಂದ

ಕಾ|| ಇ. ಎಂ. ಎಸ್.

ಸಂದರ್ಭ ಸಾಧಕರು ಯಾರು ?

ಕಾ|| ಇ. ಎಂ. ಎಸ್.

ಜನತಾ ನಾಯಕ ಮಧು ದಂಡವತೆಯವರು ವಿರೋಧ ಪಕ್ಷಗಳ ನಡುವೆ ಭಿನ್ನಾಭಿಪ್ರಾಯದ ಅಂಶಗಳ ಬದಲಾಗಿ ಸಹಮತದ ಅಂಶಗಳನ್ನು ಒತ್ತಿ ಹೇಳಲು ಇಚ್ಛೆ ಪಡುತ್ತಾರೆ. ಆದರೆ ಅವರದೇ ಪಕ್ಷದ ಅಧ್ಯಕ್ಷ ಚಂದ್ರಶೇಖರ್‌ರವರು, ಬಿಜೆಪಿಯ ಅದ್ವಾನಿ, ಲೋಕದಳದ ಬಹುಗುಣರವರು ಸೇರಿ, ಮೂರು ವಿರೋಧ ಪಕ್ಷಗಳ ನಾಯಕರು ರಾಜೀವ್‌ಗಾಂಧಿಯವರ ಬಗ್ಗೆ ಸಿ.ಪಿ.ಐ. [ಎಂ] ನ ನೀತಿಯಲ್ಲಿ ಆದ ವಿರುದ್ಧ ಬದಲಾವಣೆಯನ್ನು ಹಾಗೂ ಪ್ರಧಾನಿ ಮತ್ತೆ ಜನತೆಯಿಂದ ಹೊಸ ಆದೇಶ ಪಡೆಯಬೇಕೆಂಬ ಸಲಹೆಯನ್ನು ಸ್ವಾಗತಿಸಿದ್ದಾರೆ ಎಂದು 'ಸ್ಟೇಟ್ಸ್ ಮನ್' ಪತ್ರಿಕೆ ವರದಿ ಮಾಡಿದೆ.

ಸಿ.ಪಿ.ಐ.(ಎಂ) ಹಾಗೂ ಈ ಮೂರು ಪಕ್ಷಗಳ ನಡುವೆ ವ್ಯತ್ಯಾಸ ವಿದೆ ನಿಜ ಹಾಗೆಯೇ ಈ ಮೂರು ಪಕ್ಷಗಳ ನಡುವೆಯೂ ವ್ಯತ್ಯಾಸ ವಿದೆ. ಆದರೆ ಈ ವ್ಯತ್ಯಾಸ ರಾಜೀವ್ ಗಾಂಧಿಯವರನ್ನು ವಿರೋಧಿಸಬೇಕೇಬೇಡವೇ? ಎಂಬ ಬಗ್ಗೆ ಅಲ್ಲಿ ಹೇಗೆ ವಿರೋಧಿಸಬೇಕು ಎಂಬಬಗ್ಗೆ ಅದಕ್ಕಾಗಿಯೇ ಜನತಾ ಪಕ್ಷ ಹಾಗೂ ಲೋಕದಳಗಳು ಕೇರಳದ ಎಡ ಪ್ರಜಾಪ್ರಭುತ್ವ ರಂಗದಲ್ಲಿ ಹಾಗೂ ವಿರೋಧ ಪಕ್ಷಗಳ ಶೃಂಗ ಸಭೆಗಳನ್ನು ನಡೆಸುವುದರಲ್ಲಿ ಸಹಕರಿಸಿದುವು. ಸಿ.ಪಿ.ಐ. [ಎಂ] ಬಿಜೆಪಿಯ ಜೊತೆ ಹಿಂದೆಂದೂ ಸಹಕಾರ ಸಂಬಂಧವನ್ನು ಇಟ್ಟುಕೊಂಡಿರಲಿಲ್ಲ. ಈಗಲೂ ಇಟ್ಟು ಕೊಳ್ಳಬಯಸುವುದಿಲ್ಲ.

ಬಹುಗುಣರ ಪಕ್ಷ ಬಹುಕಾಲದಿಂದ ಜಾತ್ಯಾತೀತ ಪ್ರಜಾಸತ್ತಾತ್ಮಕ ನಿಲುವನ್ನು ಹೊಂದಿ ಬಿಜೆಪಿ, ಮುಸ್ಲಿಂ ಲೀಗ್ ಹಾಗೂ ಇತರ ವಿಚ್ಛಿದ್ರಕಾರಿಗಳನ್ನು ವಿರೋಧಿಸುತ್ತಾ ಈ ವಿಷಯದಲ್ಲಿ ಸಿ.ಪಿ.ಐ. [ಎಂ] ನ ಜೊತೆಗೂಡಿದ್ದರೂ ಇತ್ತೀಚೆಗೆ ಹರ್‍ಯಾಣದಲ್ಲಿ ಬಿಜೆಪಿಯ ಜೊತೆ ಕೂಡಿಕೊಂಡಿತು. ಏಕೆ ? ಇತರ ವಿರೋಧ ಪಕ್ಷಗಳಂತೆಯೇ ಲೋಕದಳಕ್ಕೂ ತಕ್ಷಣವೇ ಫಲ ದೊರಕಬೇಕೆಂಬ ಆಸೆಯಿಂದ. ಲೋಕದಳದ ಸ್ಥಾಪಕ ಚರಣ್‌ಸಿಂಗ್‌ರವರು ಜನಸಂಘದ ಜೊತೆ ಸಂಬಂಧ ತ್ಯಜಿಸಬೇಕೆಂದೇ ಜನತಾ ಪಕ್ಷದಿಂದಹೊರಬಂದುದು ಅದಕ್ಕಾಗಿಯೇ ಜನತಾಪಕ್ಷ ಬಿದ್ದುಹೋದುದು ಮುಖ್ಯವಾಗಲಿಲ್ಲ. ಇಂದಿನ ಅಧ್ಯಕ್ಷ ಬಹುಗುಣರು ಆರೆಸ್ಸೆಸ್ ಧಾಳಿಗಳ ವಿರುದ್ಧ ಮುಸ್ಲಿಮರ ರಕ್ಷಕರು ಎಂದು ಬೆಳೆಸಿಕೊಂಡಿರುವ ಖ್ಯಾತಿಯೂ ಮುಖ್ಯವಾಗಲಿಲ್ಲ. ಮುಖ್ಯವಾದದ್ದು ಲೋಕದಳ ಹಾಗೂ ಬಿಜೆಪಿಗಳ ಗ್ರಾಮೀಣ ಹಾಗೂ ನಗರಗಳ ಮತ ಬ್ಯಾಂಕುಗಳು ಸೇರಿ ಚುನಾವಣಾ ವಿಜಯವನ್ನು ತಂದು ಕೊಡಬೇಕೆಂಬುದಷ್ಟೇ ಮುಖ್ಯವಾಯಿತು.

ಇದೇ ರೀತಿಯ 'ತಕ್ಷಣದ ಫಲಕ್ಕಾಗಿಯೇ ಎಡ ಪಕ್ಷಗಳನ್ನು ಹೊರತುಪಡಿಸಿ ಎಲ್ಲಾ ವಿರೋಧ ಪಕ್ಷಗಳೂ ಜೈಲ್‌ಸಿಂಗ್‌ರವರನ್ನು ವಿರೋಧ ಪಕ್ಷಗಳ ಅಭ್ಯರ್ಥಿಯಾಗಿಸಬಯಸಿದ್ದು. ಈನಿಲುವನ್ನು ಒಪ್ಪಿಕೊಳ್ಳಲಿಲ್ಲವೆಂದೇ, ಎಡ ಪಕ್ಷಗಳು ವಿರೋಧ ಪಕ್ಷಗಳಿಗೆ 'ನಂಬಿಕೆದ್ರೋಹ' ಮಾಡಿದುವು.ಇದು 'ಮಾಸ್ಕೋದಆದೇಶ'ದಂತೆ 'ರಾಜೀವ್ ಗಾಂಧಿಯವರನ್ನು ರಕ್ಷಿಸುವ ತಂತ್ರ' ಎಂದು ಕರೆದದ್ದು. ಈ ಎಡ ವಿರೋಧಿ ಅಪಪ್ರಚಾರವನ್ನು ಒಂದು ತಿಂಗಳ ಕಾಲ ನಡೆಸಿದ ಈ ಪಕ್ಷಗಳು ಸಿ.ಪಿ.ಐ. [ಎಂ] ರಾಜೀವ್ ಗಾಂಧಿಯ ರಕ್ಷಕರೇನಲ್ಲ ಎಂದು ಮನಗಂಡ ಮೇಲೆ ಅದನ್ನು ಬದಲಾವಣೆ ಎಂದು ಕರೆಯುತ್ತಿರುವುದು.

ನಾವು ಇವರನ್ನು ಕೇಳಬೇಕಾಗಿದೆ ಸೋವಿಯೆತ್ ನಾಯಕತ್ವದ ಧೋರಣೆಯಲ್ಲಿಯೂ ಬದಲಾವಣೆಯಾಗಿದೆಯೇ ಸೋವಿಯೆತ್ ಆಜ್ಞೆಗನುಗುಣವಾಗಿ ಪ್ರಧಾನ ಮಂತ್ರಿಯವರನ್ನು "ರಕ್ಷಿಸುವ" ಕೆಲಸವನ್ನು ಬಿಟ್ಟು ಅವರನ್ನು "ಆಳಕ್ಕೆ ನೂಕುವ" ಧೋರಣೆಯನ್ನು ತಳೆದರೇ ಅಥವಾ ಭಾರತದ ಕಮ್ಯೂನಿಸ್ಟರು ತಮ್ಮ ರಾಜಕೀಯ ಚಟುವಟಿಕೆಗಳಿಗಾಗಿ ಸೋವಿಯೆತ್ ಆದೇಶಗಳ ಮೇಲೆ ಅವಲಂಬಿಸುವುದಿಲ್ಲವೆಂದು ಒಪ್ಪುತ್ತಾರೆಯೇ.

ಚುನಾವಣೆಗೆ ಮೊದಲು ಆಳುವ ಕಾಂಗ್ರೆಸ್ ಪಕ್ಷ ಹೊರನೋಟಕ್ಕೆ ರಾಜಕೀಯವಾಗಿ ಮತ್ತು ವಾಸ್ತವಿಕವಾಗಿ ಐಕ್ಯವಾಗಿರುವಂತೆ ಕಾಣಿಸುತ್ತಿತ್ತು. ಇಂದು "ಭಿನ್ನಮತೀಯ ಕಾಂಗ್ರೆಸ್ಸಿಗರೆಂದು ಹೆಸರಾಗಿರುವವರು ಅಂದು ತಮ್ಮ ಪಕ್ಷದ ಅಧಿಕೃತ ಅಭ್ಯರ್ಥಿಗೆ ತಮ್ಮ ಮತಗಳನ್ನೊತ್ತಿ ತಮ್ಮ ನಂಬಿಕೆಯನ್ನುಳಿಸಿಕೊಳ್ಳಲು ಕಾತುರರಾಗಿದ್ದರು.

ಅದನ್ನು ಮಾಡಿದನಂತರ ಈಗ ತಮ್ಮ ಹಿಂದಿನ ನಾಯಕರೊಡನೆ ಬಹಿರಂಗ ರಾಜಕೀಯ ವಿರೋಧದಲ್ಲಿ ತೊಡಗಿದ್ದಾರೆ. ಅಧ್ಯಕ್ಷರ ಚುನಾವಣೆಯನಂತರ ಪರಿಸ್ಥಿತಿಯಲ್ಲಾದ ಈ ಬದಲಾವಣೆ ಕಡೆಗೆ 'ಪೀಪಲ್ಸ್ ಡೆಮಾಕ್ರಸಿ' ಗಮನ ಸೆಳೆದಿದ್ದು.

ಈಗ "ಜೈಲ್ ಸಿಂಗ್ ಅಭ್ಯರ್ಥಿಯಾಗಿದ್ದರೇ ?" ಎಂಬ ಬಗ್ಗೆ ಊಹಾಪೋಹದಲ್ಲಿ ತೊಡಗುವುದು ನಿರರ್ಥಕವಾದರೂ ಎರಡು ಸಂಗತಿಗಳು ಗಮನಾರ್ಹ

ಒಂದು ಜೈಲ್ ಸಿಂಗ್‌ರು ಅಭ್ಯರ್ಥಿಯಾಗಿದ್ದರೆ ಹೋರಾಟ ಅಧ್ಯಕ್ಷರ ಅಧಿಕಾರದ ಪ್ರಶ್ನೆಗಳ ಮೇಲಲ್ಲದೆ ಕೇವಲ ಕಾಂಗ್ರೆಸಿನ ಎರಡು ಗುಂಪುಗಳ ನಡುವಿನ ಕಾಳಗವಾಗುತ್ತಿತ್ತು. ಮತ್ತೊಂದು, ಕಾಂಗ್ರೆಸ್ ಅಭ್ಯರ್ಥಿ ಅಧ್ಯಕ್ಷರಾದದು ಕಾಂಗ್ರೆಸ್ ಪಕ್ಷದೊಳಗೆ ಕುದಿಯುತ್ತಿದ್ದ ಬಿಕ್ಕಟ್ಟನ್ನು ಪರಿಹರಿಸಲಿಲ್ಲ. ಅದಕ್ಕೆ ಬದಲಾಗಿ ಧೋರಣೆಯ ಪ್ರಶ್ನೆಗಳ ಮೇಲೆ ಬಹಿರಂಗಕ್ಕೆ ಬಂದಿದೆ. ಈ ಭಿನ್ನಮತೀಯ ಕಾಂಗ್ರೆಸ್ಸಿಗರ ಹಿಂದೆ ಜನ ಸಮುದಾಯ ನೆರೆಯುತ್ತಿರುವುದು ದೇಶದಲ್ಲಿ ರಾಜಕೀಯ ಶಕ್ತಿಗಳ ಹೊಸ ಸಮೀಕರಣವನ್ನು ತರುವ ಸಾಧ್ಯತೆಯನ್ನು ಸೂಚಿಸುತ್ತಿದೆ.

ರಾಜ್ಯಾದ್ಯಂತ ಆಗಸ್ಟ್-3 ರ ಪಿಕೆಟಿಂಗ್

ದ. ಕ. ಜಿಲ್ಲೆ

ಮಂಗಳೂರು

ಆಗಸ್ಟ 3 ರಂದು ಕೇಂದ್ರಸರಕಾರಿ ಕಛೇರಿಗಳ ಮುಂದೆ ಸತ್ಯಾಗ್ರಹ ನಡೆಸಿ ಬಂಧನಕ್ಕೆ ಒಳಗಾಗಬೇಕೆಂದು ಕಾರ್ಮಿಕ ಸಂಘಗಳ ರಾಷ್ಟ್ರೀಯಆಂದೋಲನ ಸಮಿತಿಯು ನೀಡಿದ ಕರೆಗೆ ಅನುಗುಣವಾಗಿ ದ.ಕ. ಜಿಲ್ಲೆಯಾದ್ಯಂತ ಕೇಂದ್ರ ಸರಕಾರದ ಕಛೇರಿಗಳ ಮುಂದೆ ಪಿಕೆಟಿಂಗ್ ನಡೆಸಿ ಸುಮಾರು 5000 ಕಾರ್ಮಿಕರು ಬಂಧನಕ್ಕೆ ಒಳಗಾದರು. ಸಿ. ಐ. ಟಿ. ಯು.ಮತ್ತು ಎ. ಐ. ಟಿ. ಯು. ಸಿ. ನೇತೃತ್ವದ ಕಾರ್ಮಿಕರು ಮುಷ್ಕರ ಮಾಡಿ ಸತ್ಯಾಗ್ರಹದಲ್ಲಿ ಭಾಗವಹಿಸಿದರು. ಮಂಗಳೂರಿನಲ್ಲಿ ಎಚ್.ಎಂ.ಎಸ್. ನೇತೃತ್ವದ ಕಾರ್ಮಿಕರೂ ಸತ್ಯಾಗ್ರಹದಲ್ಲಿ ಭಾಗವಹಿಸಿ ಬಂಧಿತರಾದರು.

ಬೆಳಿಗ್ಗೆ 10ಗಂಟೆಯಿಂದ ಸಂಜೆ 4ರ ತನಕ ಒಟ್ಟು 21 ತಂಡಗಳಲ್ಲಿ 2000 ಕಾರ್ಮಿಕರು ಪಿಕೆಟಿಂಗ್‌ನಲ್ಲಿ ಭಾಗವಹಿಸಿದ್ದರು. ಕಾರ್ಯಕ್ರಮದ ನೇತೃತ್ವವನ್ನು ಸಿ. ಐ. ಟಿ. ಯು. ಜಿಲ್ಲಾ ಕಾರ್ಯದರ್ಶಿ ಕೆ. ಮೂಸಬ್ಬ ಉಪಾಧ್ಯಕ್ಷ ಬಿ.ಮಾಧವ, ಎ.ಐ. ಟಿ. ಯು.ಸಿ. ಜಿಲ್ಲಾ ಕಾರ್ಯದರ್ಶಿ ಬಿ.ಶೀನ, ರಾಜ್ಯ ಎಚ್. ಎಂ. ಎಸ್. ಅಧ್ಯಕ್ಷ ಎಂ. ಲೋಕಯ್ಯ ಶೆಟ್ಟಿ ಮೊದಲಾದವರು ವಹಿಸಿದ್ದರು.

ಕುಂದಾಪುರ

ಸಿ.ಐ.ಟಿ.ಯು. ಕಾರ್ಮಿಕ ಸಂಘಗಳ ನೇತೃತ್ವದಲ್ಲಿ ಕಾರ್ಮಿಕ ಸಂಘಗಳ ರಾಷ್ಟ್ರೀಯ ಆಂದೋಳನ ಸಮಿತಿಯ ಕರೆಯ ಅನುಗುಣವಾಗಿ ಅಂಚೆ ಕಛೇರಿ ಎದುರು ಎರಡು ಸಾವಿರಕ್ಕೆ ಹೆಚ್ಚು ಕಾರ್ಮಿಕರು ಪಿಕೆಟಿಂಗ್ ಮಾಡಿ ಬಂಧನಕ್ಕೊಳಗಾದರು. 6C0ಕ್ಕೂ ಮಿಕ್ಕ ಮಹಿಳಾ ಕಾರ್ಮಿಕರಿದ್ದರು. ಪಿಕೆಟಿಂಗ್ ನೇತೃತ್ವವನ್ನು ಕಾಂ. ಅಬ್ರಹಾಂ ಕರ್ಕಡ, ಕೆ. ಶಂಕರ್, ಸಿ.ನಾರಾಯಣ, ಮತ್ತು ಬಿ. ಮಹಾಬಲರವರು ವಹಿಸಿದ್ದರು. ಈ ಚಳುವಳಿಯಲ್ಲಿ ಭಾಗವಹಿಸಿ ಬಂಧನಕ್ಕೊಳಗಾದ ಕಾರ್ಮಿಕರಿಗೆ ಸಿ.ಐ.ಟಿ.ಯು. ಜಿಲ್ಲಾ ಜಂಟಿಕಾರ್ಯದರ್ಶಿ ಕೆ. ಶಂಕರ್ ಅಭಿನಂದನೆ ಸಲ್ಲಿಸಿದ್ದಾರೆ.

ಉಡುಪಿ

ಸುರಿಯುವ ಮಳೆಯಲ್ಲಿಯೂಕೇಂದ್ರ ಸರ್ಕಾರದ ಕಾರ್ಮಿಕ ವಿರೋಧಿ ನೀತಿಗಳನ್ನು ಪ್ರತಿಭಟಿಸಲು ತಂಡ ತಂಡವಾಗಿ ಅಂಚೆ ಕಛೇರಿಯ ಪಿಕೆಟಿಂಗ್ ನಡೆಸಿ 262 ಮಹಿಳೆಯರು ಸೇರಿ 610 ಮಂದಿ ಬಂಧನಕ್ಕೊಳಗಾಗಿದ್ದಾರೆ. ಇವರ ನೇತೃತ್ವವನ್ನು ಡೆವಿಡ್ ಕಾರ್ಕಡ, ಎಚ್. ವಿಠಲ, ಸುನಂದ, ಆಶಾ ಶೆಟ್ಟಿ, ಸುಂದರಿ ಶೆಟ್ಟಿ ಯವರು ವಹಿಸಿದ್ದರು.

ಮೂಡಬಿದರೆ

ಆಗಸ್ಟ 3ರಂದು ಇತ್ತೀಚೆಗೆ ಸಂಘಟನೆಗೊಳುತ್ತಿರುವ ಮೂಡಬಿದರೆಯ ಬೀಡಿ ಕಾರ್ಮಿಕರು ಅಲ್ಲಿಯ ಅಂಚೆ ಕಛೇರಿಯ ಮುಂದೆ ಪಿಕೆಟಿಂಗ್ ನಡೆಸಿ ಮೂನ್ನೂರ ಎಪ್ಪತ್ತೈದು ಮಂದಿಮಹಿಳೆಯರು ಸೇರಿದಂತೆ425 ಮಂದಿ ಬಂಧನಕ್ಕೊಳಗಾದರು. ಪಿಕೆಟಿಂಗ್ ನೇತೃತ್ವವನ್ನು ರಾಜ್ಯ ಬೀಡಿ ಫೆಡರೇಷನ್ ಕಾರ್ಯದರ್ಶಿ ಕಾ. ಯು.ಬಿ.ಲೋಕಯ್ಯ, ಕಾ. ಬಾಲಕೃಷ್ಣ ಶೆಟ್ಟಿ, ವಾಸುದೇವ ಆಚಾರಿ, ಹಾಗೂ ಕುಮಾರಿ ರಮಣಿ ವಹಿಸಿದ್ದರು.

ಕೆ. ಜಿ. ಎಫ್.

ರಾಷ್ಟ್ರೀಯ ಆಂದೋಳನ ಸಮಿತಿಯ ಕರೆಯ ಮೇರೆಗೆ ಕೆ.ಜಿ.ಎಫ್‌ನ ಎಲ್ಲಾ ಕಾರ್ಮಿಕ ಸಂಘಗಳ ಸಮನ್ವಯ ಸಮಿತಿಯ ನೇತೃತ್ವದಲ್ಲಿ ಬಂಗಾರದ ಗಣಿ ಹಾಗೂಬೆಮಲ್‌ನ ಸುಮಾರು 500 ಕಾರ್ಮಿಕರು ಮಾರಿ ಕುಪ್ಪಂನಲ್ಲಿ ಸೇರಿ ಪ್ರತಿ ರೈಲ್ವೆ ನಿಲ್ದಾಣದಲ್ಲಿಯು ಇಳಿದು ಘೋಷಣೆಕೂಗುತ್ತಾ ಬಂಗಾರಪೇಟೆ ಸೇರಿದರು. ಬೆಳಗ್ಗೆ 8-40ಕ್ಕೆ ಬಂಗಾರುಪೇಟೆ ತಲುಪುವ ಮದ್ರಾಸ್ ಎಕ್ಸ್‌ಪ್ರೆಸ್ ರೈಲನ್ನು ಅರ್ಧಗಂಟೆಗೂ ಹೆಚ್ಚು ಕಾಲ ತಡೆದು ನಿಲ್ಲಿಸಿ ಬಂಧನಕೊಳಗಾದರು. ಕಾರ್ಮಿಕರನ್ನುದ್ದೇಶಿಸಿ ಕಾ. ಟಿ. ಎಸ್. ಮಣಿ, ಸಮನ್ವಯ ಸಮಿತಿ ಕಾರ್ಯದರ್ಶಿ ಕಾ.ಅಶ್ವಥನಾರಾಯಣ, ಕಾ|| ಸವರಿದಾಸ್, ಹಾಗೂ ಕಾ. ಜಯರಾಮ್ ಮಾತನಾಡಿದರು. ಎಂ.ಕೆ. ಪಂಧೆಯವರ ಬೆಲೆ ಸೂಚ್ಯಾಂಕದ ಮೋಸದ ಬಗ್ಗೆಗಿನಕಿರು ಪುಸ್ತಕದ ಸಾರಾಂಶವನ್ನು 5 ಸಾವಿರ ಪ್ರತಿಮುದ್ರಿಸಿ ಕೂಡ ಹಂಚಲಾಗಿದೆ ಎಂದು ಕಾ.ತಾರಾನಾಥ್ ವರದಿ ಮಾಡಿದ್ದಾರೆ.

ಹರಿಹರ

ರಾಷ್ಟ್ರೀಯ ಆಂದೋಳನ ಸಮಿತಿ ಕರೆಯಂತೆ ಹರಿಹರದ ಅಂಚೆ ಕಛೇರಿಯನ್ನು ಸಿ.ಐ.ಟಿ.ಯು ಕಾರ್ಯಕರ್ತರು ಪಿಕೆಟಿಂಗ್ ಮಾಡಿ ಬಂಧನ ಕೊಳಗಾದರು. ಬಂಧಿತರನ್ನು ಜಾಮೀನಿನ ಮೇಲೆ ಬಿಡುಗಡೆ ಮಾಡಲಾಯಿತು.

(6ನೇ ಪುಟ ನೋಡಿ)

ಬೆಂಗಳೂರು ಜಿಲ್ಲಾ ರೈತ ಸಮಾವೇಶ

ಬೆಂಗಳೂರು ಜಿಲ್ಲಾಪ್ರಾಂತ ರೈತ ಸಂಘದ ಜಿಲ್ಲಾ ಮಟ್ಟದ ಸಮಾವೇಶ ಆಗಸ್ಟ 10ರಂದು ಎನ್.ಜಿ.ಓ. ಸಭಾಂಗಣದಲ್ಲಿ ಯಶಸ್ವಿಯಾಗಿ ಜರುಗಿತು. ಸುಮಾರು 500 ಮಂದಿ ಜಿಲ್ಲೆಯ ವಿವಿಧ ಭಾಗಗಳಿಂದ ಬಂದು ಪಾಲ್ಗೊಂಡಿದ್ದ ಈ ಸಮಾವೇಶದಲ್ಲಿ ಅರ್ಧಕ್ಕಿಂತ ಹೆಚ್ಚು ಮಹಿಳೆಯರನ್ನೊಳಗೊಂಡಿತು. ಮೊದಲಿಗೆ ಕಾ||ಲಕ್ಕಣ್ಣ ಸ್ವಾಗತಿಸಿದರು. ಕಾ||ಮುಗವಾಳಪ್ಪ, ಶ್ಯಾಮಣ್ಣರೆಡ್ಡಿ, ನಾಗಮೋಹನ್ ದಾಸ್‌ರವರನ್ನೊಳಗೊಂಡ ಅಧ್ಯಕ್ಷ ಮಂಡಳಿ ಕಾರ್ಯ ಕಲಾಪ ನಡೆಸಿತು. ಪ್ರಾಂತ ರೈತ ಸಂಘದ ರಾಜ್ಯ ಅಧ್ಯಕ್ಷರಾದ ಕಾ|| ಎಂ.ಎನ್. ಉಗ್ರಪ್ಪನವರು ಸಮಾವೇಶವನ್ನು ಉದ್ಘಾಟಿಸಿದರು. ಸ್ವಾತಂತ್ರ್ಯ ಪೂರ್ವದಲ್ಲಿ ರೈತರು ನಡೆಸಿದ ಹಲವಾರು ಸಮರ ಧೀರ ಹೋರಾಟಗಳನ್ನು ನೆನಪಿಸಿದ ಅವರು ಸೆಪ್ಟೆಂಬರ್ ಚಳುವಳಿಯ ಬೇಡಿಕೆಗಳ ಕುರಿತು ವಿವರಿಸಿ ಮೊಟ್ಟ ಮೊದಲ ಅಖಿಲಭಾರತ ಶಿಸ್ತು ಬದ್ಧವಾದ ಹೋರಾಟವನ್ನು ಯಶಸ್ವಿಗೊಳಿಸಬೇಕೆಂದುಕರೆ ನೀಡಿದರು.

ಸಿ.ಐ.ಟಿ.ಯು. ಅಧ್ಯಕ್ಷ ಕಾ||ಎಸ್. ಸೂರ್ಯನಾರಾಯಣರಾವ್‌ರವರು ಮಾತನಾಡಿ, ಇತ್ತೀಚೆಗೆ ರಾಜ್ಯ-ದೇಶದಲ್ಲಿ ಬೆಳೆದು ಬರುತ್ತಿರುವ ರೈತ ಚಳುವಳಿಯಲ್ಲಿ ಕಾಣುತ್ತಿರುವ ವಿಭಿನ್ನತೆಯನ್ನು ನೀವು ಗುರುತಿಸಬೇಕು, ಇಡೀ ರೈತ ಸಮುದಾಯ ಐಕ್ಯಗೊಳಿಸುವಂತಹ ಹೋರಾಟ ನಮ್ಮದಾಗಬೇಕೆಂದು ವಿನಂತಿಸಿದರು. ರೈತರ ಚಳುವಳಿಯಲ್ಲಿ ಕಾರ್ಮಿಕರು ಕಾರ್ಖಾನೆಗಳಲ್ಲಿ ಮುಷ್ಕರ ಹೂಡಿ ನಿಮ್ಮ ಪಿಕೆಟಿಂಗ್‌ನಲ್ಲಿ ಪಾಲ್ಗೊಂಡು ಹೋರಾಟ ಯಶಸ್ವಿಗಾಗಿಎಲ್ಲಾ ರೀತಿಯ ಬೆಂಬಲ ನೀಡುವುದಾಗಿ ಘೋಷಿಸಿದರು. ರೈತ ಸಂಘದ ಕಾರ್ಯದರ್ಶಿ ಕಾ. ಪಿ.ಜಗನ್ನಾಥ್‌ರವರು ಕರ್ನಾಟಕದ ರೈತ ಚಳುವಳಿ ಕುರಿತು ಮಾತನಾಡಿ ಹೆಗಡೆ ಸರ್ಕಾರ ಬಹುಮತವಿದೆ ಎಂಬ ಕಾರಣಕ್ಕೆ ರೈತರ ಸಮಸ್ಯೆಗಳನ್ನು ಕಡೆಗಣಿಸಿರುವುದನ್ನು ಖಂಡಿಸಿದರು. ವಿವಿಧ ಸಾಮೂಹಿಕ ಸಂಘಟನೆಗಳ ನಾಯಕರು ಸಮಾವೇಶಕ್ಕೆ ಶುಭಾಶಯ ಕೋರಿ ಮಾತನಾಡಿದರು. ●

ಕೇರಳದಲ್ಲಿ ಮಾನವ ಸರಪಳಿ

ಕೇರಳದಲ್ಲಿ ಡಿ. ವೈ. ಎಫ್. ಐ ಹಮ್ಮಿಕೊಂಡ ಮಾನವ ಸರಪಳಿ ಕಾರ್ಯಕ್ರಮಕ್ಕೆ ಎಂದಿಲ್ಲದಉತ್ಸಾಹ ಹುಮ್ಮಸ್ಸುಗಳ ಸ್ವಾಗತ ಬೆಂಬಲ ದೊರೆಯುತ್ತಿದೆ. ವಿಶ್ವ ಪ್ರಸಿದ್ಧ ಸಿತಾರ್‌ವಾದಕ ಹಾಗೂ ರಾಜ್ಯಸಭಾ ಸದಸ್ಯ ಪಂಡಿತ್ ರವಿಶಂಕರ್ ರಂತಹವರು ಬೆಂಬಲ ನೀಡಿದ್ದಾರೆ. ರಾಜ್ಯಸಭಾ ಸದಸ್ಯ ಎಂ. ಎ. ಬೇಬಿಯವರ ಬಳಿ ಇದನ್ನು ವ್ಯಕ್ತಪಡಿಸಿದ್ದಾರೆ. ಮುಸ್ಲಿಂಲೀಗ್‌ನ ಮಾಜಿಶಿಕ್ಷಣಮಂತ್ರಿ ಹಾಗೂ ಸ್ಪೀಕರ್ ರಾದ ಚಾಕಿರಿ ಅಹಮದ್‌ಕುಟ್ಟಿ ತಮ್ಮ ಪಕ್ಷದವರ ಕೆಂಗಣ್ಣನ್ನು ಲಕ್ಷಿಸದೆ ದೇಶದ ಐಕ್ಯತೆಗಾಗಿ ಈ ಮಾನವ ಸರಪಳಿಗಳಲ್ಲಿ ಭಾಗವಹಿಸುತ್ತಿದ್ದಾರೆ. ಬೇರೆಬೇರೆ ಪಕ್ಷಗಳ ಯುವ ವಿದ್ಯಾರ್ಥಿ ಸಂಘಟನೆಗಳ ಕಾರ್ಯಕರ್ತರು ತಮ್ಮ ಸಂಘಟನೆಗಳಿಗೆ ರಾಜೀನಾಮೆ ನೀಡಿ ಈ ಸರಪಳಿ ಕಾರ್ಯಕ್ರಮದಲ್ಲಿ ಭಾಗವಹಿಸುತ್ತಿದ್ದಾರೆ. ○

ಕವಲುದಾರಿಯಲ್ಲಿ ನಿಂತಿರುವ ಸ್ವತಂತ್ರ ಭಾರತ

ರಾಜಕೀಯ ಸ್ವಾತಂತ್ರ್ಯಕ್ಕಾಗಿ ಹೋರಾಡುವುದೆಂದರೆ ಭಾರತೀಯ ಜನತೆಯ ಐಕ್ಯತೆಗಾಗಿ ಹೋರಾಡುವುದು ಎಂದು ನಮ್ಮ ಸ್ವಾತಂತ್ರ್ಯ ಆಂದೋಲನದ ಮುಖಂಡರು ಹೇಳಿಕೊಳ್ಳುತ್ತಿದ್ದರು. ವಿದೇಶಿ ಆಳ್ವಿಕೆ ನಮ್ಮ ಮೇಲೆ ಕೃತಕ ಐಕ್ಯತೆಯೊಂದನ್ನು ಹೇರಿತ್ತು. ಅದರ ಸ್ಥಾನದಲ್ಲಿ ಸ್ವಾತಂತ್ರ್ಯಕ್ಕಾಗಿ ಹೋರಾಟಗಳು ಕಷ್ಟ-ನಷ್ಟಗಳು ಹಾಗೂ ಜಾತಿ, ಮತ, ಭಾಷೆಯ ಭೇದವಿಲ್ಲದೆ ತಮ್ಮಲ್ಲಿಅಸಂಖ್ಯಾತ ಸುಪುತ್ರ, ಸುಪುತ್ರಿಯರ ತ್ಯಾಗ, ಬಲಿದಾನಗಳ ಮೂಲಕ ಭಾರತೀಯ ಜನತೆ ನೈಜ ಐಕ್ಯತೆಯನ್ನು ಕಟ್ಟಿ ಬೆಳೆಸಿದರು.

ಆದರೆ ಸ್ವಾತಂತ್ರ್ಯ ಪಡೆದು ನಾಲ್ಕು ದಶಕಗಳನ್ನು ಪೂರ್ಣಗೊಳಿಸುತ್ತಿರುವ ನಾವೀಗ ಏನು ನೋಡುತ್ತಿದ್ದೇವೆ? ಖಾಲಿಸ್ತಾನೀ, ಗೂರ್ಖಾಲ್ಯಾಂಡ್ ಪ್ರತ್ಯೇಕತಾವಾದಿಗಳು ಮಾತ್ರವಲ್ಲ, ಪ್ರತಿಯೊಂದು ರಾಜ್ಯದಲ್ಲೂ ಜಾತಿವಾದಿಗಳು ಭಾಷಾ ಸಂಕುಚಿತತವಾದಿಗಳು, ತಮ್ಮ ಪ್ರಭಾವ ಬೆಳೆಸಿಕೊಳುತ್ತಿದ್ದಾರೆ. ದೇಶದ ಉದ್ದಗಲಕ್ಕೂ ಮೂಲಭೂತವಾದಿಗಳು ಕೋಮುವಿಷ ಹರಿಸುತ್ತಿದ್ದಾರೆ. ದೇಶ ಅತ್ಯಂತ ಅಪಾಯಕಾರಿ ಸವಾಲನ್ನು ಎದುರಿಸುತ್ತಿದೆ.

ವಿಚ್ಛಿದ್ರಕಾರಿಗಳಿಂದ ದೇಶದ ಸಮಗ್ರತೆ ಮತ್ತು ಐಕ್ಯತೆಗೆ ಬಂದಿರುವ ಭಾರೀ ಅಪಾಯವನ್ನು ಈಗ ಸುಮಾರಾಗಿ ಎಲ್ಲರೂ ಕಾಣುತ್ತಿದ್ದಾರೆ. ಕಾಂಗ್ರೆಸ್ (ಐ) ಕೂಡಾ. ಕಳೆದ ವರ್ಷ ಆಗಸ್ಟ್ 9 ರಿಂದ 14ನ್ನು "ರಾಷ್ಟ್ರೀಯ ಸಮಗ್ರತಾ ವಾರ"ವಾಗಿ ಆಚರಿಸಲು ಅದು ಕರೆ ನೀಡಿತ್ತು. ಆದರೆ ಸ್ವಾತಂತ್ರ್ಯ ಹೋರಾಟದಲ್ಲಿ ಮೂಡಿ ಬಂದ, ಬೆಸೆದ ಐಕ್ಯತೆಗೆ ಏಕೆ ಈ ರೀತಿಯ ಸವಾಲುಗಳು ಬರುತ್ತಿವೆ ಎಂದು ವಿಶ್ಲೇಷಿಸುವ ಸಾಮರ್ಥ್ಯ ಮಾತ್ರ ಆ ಪಕ್ಷಕ್ಕೆ ಇದ್ದಂತಿಲ್ಲ.

ಇಲ್ಲಿ ಗಮನಿಸಬೇಕಾದ ಒಂದು ಸಂಗತಿಯೆಂದರೆ ವಿಚ್ಛಿದ್ರಕಾರಿಗಳ ಚಟುವಟಿಕೆಗಳು ಈ ನಾಲ್ಕನೇ ದಶಕದಲ್ಲೇ ಹಠಾತ್ತಾಗಿ ಕಂಡು ಬಂದ ಅಪಾಯವಲ್ಲ. ಸ್ವಾತಂತ್ರ್ಯದ ಮೊದಲ ದಶಕದಲ್ಲೇ ದೇಶ ಪ್ರೇಮಿಗಳು ಈ ಬಗ್ಗೆ ಆತಂಕ ವ್ಯಕ್ತಪಡಿಸಲಾರಂಭಿಸಿದ್ದರು. ಇದರಿಂದಾಗಿ 1961ರಲ್ಲಿ ರಾಷ್ಟ್ರೀಯ ಸಮಗ್ರತಾ ಸಮ್ಮೇಳನ ಕೂಡಾ ನಡೆಸಬೇಕಾಗಿ ಬಂದಿತ್ತು. ಈ ಸಮ್ಮೇಳನದಲ್ಲಿ ಕಮ್ಯುನಿಸ್ಟ್ ಪಕ್ಷದ ಪರವಾಗಿ ಮಾತನಾಡುತ್ತಾ ತತ್ಕಾಲೀನ ಪ್ರಧಾನ ಕಾರ್ಯದರ್ಶಿ ಅಜಯ್ ಘೋಷ್ ಹೀಗೆಂದಿದ್ದರು-'ಭಾರತ' ಇಂದು ತನ್ನ ಇತಿಹಾಸದಲ್ಲೇ ಹಿಂದೆಂದಿಗಿಂತಲೂ ಹೆಚ್ಚು ಆಡಳಿತಾತ್ಮಕ ಐಕ್ಯತೆ ಪಡೆದಿದೆ. ಆರ್ಥಿಕ ಯೋಜನೆಗಳನ್ನು ಒಂದು ಕೇಂದ್ರ ಸಂಘಟನೆ ರೂಪಿಸಿ ನಡೆಸುತ್ತಿದೆ. ಬ್ರಿಟಿಷರ ಕಾಲದಲ್ಲಿದ್ದಂತೆ ದೇಶದೊಳಗಿನ ಭಿನ್ನತೆಗಳ ದುರುಪಯೋಗ ಪಡಿಸಿಕೊಳ್ಳುವ ಪ್ರಭುತ್ವ ಈಗ ಇಲ್ಲ. ಇವೆಲ್ಲಾ ದೇಶದ ಐಕ್ಯತೆಯನ್ನು ದೃಢಗೊಳಿಸಲು ಅನುಕೂಲವಾದ ಸಂಗತಿಗಳು. ಆದರೂ ವಿಚ್ಛಿದ್ರಕಾರೀ, ಪ್ರತ್ಯೇಕತಾವಾದೀ ಶಕ್ತಿಗಳು ಆತಂಕಕಾರಿಯಾಗಿ ಬೆಳೆಯುತ್ತಿದ್ದು ನಮ್ಮ ಸ್ವಾತಂತ್ರ್ಯ ಹೋರಾಟದ ಅತ್ಯಮೂಲ್ಯ ಪರಂಪರೆಯಾದ ದೇಶದ ಐಕ್ಯತೆಗೆ ಬೆದರಿಕೆ ಒಡ್ಡುತ್ತಿವೆ"

ಮೂಲ ಎಲ್ಲಿದೆ ?

ಯಾಕೆ ಇಂತಹ ವಿರೋಧಾಭಾಸ? ಐಕ್ಯತೆಯ ಶಕ್ತಿಗಳು ದೃಢಗೊಳ್ಳಬೇಕಾದ ಸಮಯದಲ್ಲೇ ಐಕ್ಯತೆಗೆ ತೀವ್ರ ಬೆದರಿಕೆ ಏಕೆ ಬಂತು?

ಈ ಪ್ರಶ್ನೆಗೆ ಉತ್ತರ ಪಡೆಯಲು ಪ್ರಯತ್ನಿಸುವ ಮೊದಲು ರಾಷ್ಟ್ರೀಯ ಏಕೀಕರಣದ ಪ್ರಕ್ರಿಯೆಯನ್ನು ದುರ್ಬಲಗೊಳಿಸುವ ಅಂಶಗಳು ಸ್ವಾತಂತ್ರ್ಯ ಪೂರ್ವದಲ್ಲೂ ಇದ್ದವು ಎಂಬುದನ್ನು ನೆನಪಿನಲ್ಲಿಡಬೇಕು. ಆದರೂ ಸಾಕಷ್ಟು ಮಟ್ಟದ ಐಕ್ಯತೆ ಹಾಗೂ ಸಮಗ್ರತೆಯನ್ನು ಕಟ್ಟುವುದು ಆಗ ಸಾಧ್ಯವಾಯಿತು. ಜಾತಿವಾದಿ, ಕೋಮುವಾದಿ ಹಾಗೂ ಇತರ ವಿಚ್ಛಿದ್ರಕಾರೀ ಶಕ್ತಿಗಳನ್ನು ಹದ್ದುಬಸ್ತಿನಲ್ಲಿಡಲು ಆಗ ಸಾಧ್ಯವಾಗಿತ್ತು. ಯಾಕೆಂದರೆ ಆಗ ದೇಶದ ಜನತೆಯ ಮುಂದೆ ಒಂದು ರಾಷ್ಟ್ರೀಯ ಗುರಿಯಿತ್ತು. ರಾಜಕೀಯ ಮತ್ತು ಆರ್ಥಿಕ ಸ್ವಾತಂತ್ರ್ಯದ ಗುರಿಯಿತ್ತು. ಆದರೆ ಸ್ವಾತಂತ್ರ್ಯ ನಂತರ ಕಾಂಗ್ರೆಸ್ ಆಡಳಿತದ ಸೂತ್ರ ವಹಿಸಿಕೊಂಡ ಮೇಲೆ ಇದು ಮುಂದುವರಿಯಲಿಲ್ಲ. ಅಂದರೆ ಕಾಂಗ್ರೆಸ್‌ನ ಧೋರಣೆಗಳಲ್ಲೇ ಈ ಅಪಾಯದ ಮೂಲವಿದೆಯೆಂಬುದು ಸ್ಪಷ್ಟವಾಗುತ್ತದೆ.

ಮೇಲೆ ಹೇಳಿದ 1961ರ ರಾಷ್ಟ್ರೀಯ ಸಮಗ್ರತಾ ಸಮ್ಮೇಳನದಲ್ಲಿ ಮಾತನಾಡುತ್ತಾ ಅಜಯ್ ಘೋಷ್ ಮುಂದುವರೆದು "ಕಲ್ಯಾಣ ರಾಜ್ಯ, ಇತ್ಯಾದಿ ಘೋಷಣೆಗಳೊಡನೆ ಆಟವಾಡಿದ ನಂತರ ಕಾಂಗ್ರೆಸ್ ಮುಖಂಡರು ಸಮಾಜವಾದೀ ಮಾದರಿಯ ಸಮಾಜದ ಬಗ್ಗೆ ಮಾತನಾಡಲಾರಂಭಿಸಿದರು. ಆದರೆ ಅದರ ಪ್ರೇರಣಾದಾಯಕ ಸತ್ವವನ್ನೆಲ್ಲಾ ಕಿತ್ತು ಹಾಕಿ ತಮ್ಮ ವ್ಯಾಖ್ಯೆ ನೀಡಿದರು. ಸರಕಾರದ ವಾಸ್ತವಿಕ ಧೋರಣೆಗಳಿಗೂ ಸಮಾಜವಾದಕ್ಕೂ ಏನೂ ಸಂಬಂಧವೇ ಇರಲಿಲ್ಲ ಮಾತ್ರವೇ ಅಲ್ಲ, ಪ್ರಜಾಸತ್ತಾತ್ಮಕ ಯೋಜನಾ ಪ್ರಕ್ರಿಯೆಗೂ ಆ ಧೋರಣೆಗಳಿಗೂ ಕೂಡಾ ಏನೂ ಸಂಬಂಧವಿರಲಿಲ್ಲ. ಅವು ಬಂಡವಾಳಶಾಹೀ ಅಭಿವೃದ್ಧಿಯ ಧೋರಣೆಗಳು. ಅದೂ ಕೂಡಾ ವಿದೇಶಿ ಗುತ್ತೇದಾರಿಗಳವಿರುದ್ಧ ದೃಢ ಕ್ರಮವಿಲ್ಲದ, ಮೂಲಭೂತ ಕೃಷಿ ಸುಧಾರಣೆಗಳಿಲ್ಲದ ಧೋರಣೆಗಳು. ಇವು ಶ್ರೀಮಂತರನ್ನು ಮತ್ತಷ್ಟು ಶ್ರೀಮಂತರನ್ನಾಗಿಸಿದವು. ಬಡವರನ್ನು ಮತ್ತಷ್ಟು ಬಡವರನ್ನಾಗಿಸಿದುವು. ಈ ತಳಹದಿಯ ಮೇಲೆ ರಾಷ್ಟ್ರೀಯ ಐಕ್ಯತೆ ಬೆಸೆಯುವುದು ಸಾಧ್ಯವಿರಲಿಲ್ಲ" ಎಂದು ಸ್ಪಷ್ಟವಾಗಿ ಹೇಳಿದ್ದರು. ದೇಶದಲ್ಲಿ ವಿಚ್ಛಿದ್ರಕಾರೀ ಶಕ್ತಿಗಳು ಮೊಳಕೆಯೊಡೆಯಲು ಕಾಂಗ್ರೆಸ್ ನೆಲ ಹಸನುಗೊಳಿಸಿದ್ದು ಹೀಗೆ.

ಈಗ ತೀವ್ರವಾಗಿ ಕಾಣುತ್ತಿರುವ ಅಪಾಯದ ಕಾರಣಗಳನ್ನು ವಿವರವಾಗಿ ಪರಿಶೀಲಿಸುವಾಗ ನಮಗೆ ಕಂಡು ಬರುವ ಮುಖ್ಯ ಅಂಶಗಳು.

1. ಸಾಮ್ರಾಜ್ಯಶಾಹಿ ಹಾಗೂ ಪಾಳೇಯಗಾರೀ ಶಕ್ತಿಗಳೊಂದಿಗೆ ರಾಜಿ ಮಾಡಿಕೊಂಡು ನಮ್ಮ ದೇಶ ಹಿಡಿದ ಬಂಡವಾಳಶಾಹೀ ಮಾರ್ಗ.

2. ಸಾಮ್ರಾಜ್ಯಶಾಹೀ 'ನೆರವಿ'ನ ಮೂಲಕ ಅಲ್ಲಿಯ ಸಾಂಸ್ಕೃತಿಕ ಪ್ರಭಾವ ಹರಡಿ ಸಾಮ್ರಾಜ್ಯಶಾಹೀ-ವಿರೋಧಿ ಹಾಗೂರಾಷ್ಟ್ರೀಯ ದೃಷ್ಟಿಕೋನ ಕುಂಠಿತಗೊಂಡದ್ದು.

3. ಜಾತ್ಯಾತೀತತೆಯ ವಿಕೃತ ಪರಿಕಲ್ಪನೆ 4. ಭಾಷಾ ಸಮಾನತೆಯ ಅಭಾವ 5. ಅಭಿವೃದ್ಧಿಯಲ್ಲಿನ ಅಸಮತೋಲನ ಹಾಗೂ 6. ಕೇಂದ್ರ ರಾಜ್ಯ ಸಂಬಂಧಗಳು.

---

40 ವರ್ಷ ತುಂಬುತ್ತಿರುವ ಸ್ವತಂತ್ರ ಭಾರತ
ಕವಲು ದಾರಿಯಲ್ಲಿ ನಿಂತಿದೆ ಇಂದು.
ವಸಾಹತುಶಾಹಿಯ ವಿರುದ್ಧ ಸೆಣಸಿ ಸ್ವತಂತ್ರವಾದ ದೇಶಗಳ
ಕಣ್ಣಾಗಿದೆ ನಮ್ಮ ದೇಶ.
ಭಾರತ ಹಿಡಿಯುವ ಹಾದಿ ಇಡೀ ವಿಶ್ವದ ಮೇಲೆ ಪರಿಣಾಮ
ಬೀರುತ್ತದೆ.
ಸ್ವಂತ ಕಾಲಿನ ಬಲದ ಮೇಲೆ ನಿಂತು ತಲೆಯೆತ್ತಿ
ಬಾಳುವುದೋ ? ಅಥವಾ
ನವ ವಸಾಹತುಶಾಹಿ ದೇಶಗಳ ಬಾಲಬಡುಕ
ರಾಷ್ಟ್ರವಾಗುವುದೋ ?
ಐಕ್ಯತೆಯನ್ನುಳಿಸಿಕೊಂಡು ಸದೃಢ ದೇಶವಾಗುವುದೋ
ಅಥವಾ
ವಿಚ್ಛಿದ್ರಕಾರಿ ಕುತಂತ್ರಗಳಿಗೆ ಈಡಾಗುವುದೋ ?
ಇದರ ತೀರ್ಮಾನ ಜನತೆಯ ಮೇಲೆ, ದುಡಿಯುವ ಜನತೆಯ
ಮೇಲೆ ನಿಂತಿದೆ.

ಬಂಡವಾಳಶಾಹೀ ಮಾರ್ಗ

ಅಜಯ್ ಘೋಷ್‌ರವರ ಮಾತುಗಳಲ್ಲೇ ಹೇಳುವುದಾದರೆ "ಸ್ವಾತಂತ್ರ್ಯ ಗಳಿಸಿದ ಉತ್ಸಾಹ ಸ್ವಲ್ಪ ತಣ್ಣಗಾದಾಗ ನಮ್ಮ ಜನತೆಗೆ ಕಾಂಗ್ರೆಸ್ ಆಳ್ವಿಕೆಯ ಮುಳ್ಳು ಚುಚ್ಚಲಾರಂಭಿಸಿತು. ರೈತನಿಗೆ ಆತ ನಿರೀಕ್ಷಿಸಿದಭೂಮಿ ಸಿಗಲಿಲ್ಲ. ಬದಲಿಗೆ ಒಕ್ಕಲೆಬ್ಬಿಸುವ ನೋಟೀಸು ಬಂತು. ಕಾರ್ಮಿಕ ನೋಡುತ್ತಾನೆ. ತಾನು ನಿರ್ಮಿಸಿದ ಹೆಚ್ಚುವರಿ ಸಂಪತ್ತು ಬಂಡವಾಳಶಾಹಿಗಳ ತಿಜೋರಿ ತುಂಬುತ್ತಿದೆ. ಮಧ್ಯಮ ವರ್ಗದ ನೌಕರರ ನಿಜ ಆದಾಯ ತೀವ್ರ ಬೆಲೆಯೇರಿಕೆಯಿಂದ ಕುಸಿಯಲಾರಂಭಿಸಿತು. ರಾಷ್ಟ್ರೀಯ ಪುನರ್ರಚನೆಯ ಹೆಸರಿನಲ್ಲಿ ಭಾರೀ ಹೊಣೆ ಹೊರಬೇಕಾಗಿರುವವರು ನಾವು, ಆದರೆ ಶ್ರೀಮಂತ ವರ್ಗಗಳು ಮತ್ತಷ್ಟು ಶ್ರೀಮಂತವಾಗುತ್ತಿವೆ. ಎಂಬುದನ್ನು ಎಲ್ಲಾದುಡಿಯುವ ಜನಸಾಮಾನ್ಯರು ಕಾಣಲಾರಂಭಿಸಿದರು. ಇದರ ಜೊತೆಗೆ ಎಲ್ಲೆಲ್ಲೂ ಭ್ರಷ್ಟಾಚಾರ ಆಳುವ ಪಕ್ಷದ ಸದಸ್ಯರು ತಮ್ಮ ಸ್ಥಾನಗಳ ಪೂರ್ಣಪ್ರಯೋಜನ ಪಡೆಯಲಾರಂಭಿಸಿದ್ದರು. ಅನಿವಾರ್ಯವಾಗಿ ಅಸಂತೃಪ್ತಿ ಹರಡಲಾರಂಭಿಸಿತು. ಆದರೆ ದೇಶವ್ಯಾಪೀ ಪ್ರಜಾಪ್ರಭುತ್ವವಾದೀ ಚಳುವಳಿಯ ಅಭಾವದಿಂದಾಗಿ ಪ್ರತಿಗಾಮೀ ಶಕ್ತಿಗಳು ಇದನ್ನು ದುರುಪಯೋಗ ಪಡಿಸಿಕೊಂಡರು. ಹಲವೆಡೆ ಆಳುವ ಪಕ್ಷದ ಮುಖಂಡರೇ ತಮ್ಮ ಸ್ಥಾನ ಭದ್ರಪಡಿಸಿಕೊಳ್ಳಲು ಅದನ್ನು ಬಳಸಿಕೊಂಡರು.

ಈ ಸನ್ನಿವೇಶದಲ್ಲಿ ವಿಚ್ಛಿದ್ರಕಾರೀ ಶಕ್ತಿಗಳು ಪ್ರಭಾವ ಬೆಳೆಸಿಕೊಳ್ಳುವುದು ಸ್ವಾಭಾವಿಕವೇ ಆಗಿತ್ತು. ಆಳುವ ಪಕ್ಷದೊಳಗೆ ಮತ್ತು ಕೆಲವು ವಿರೋಧ ಪಕ್ಷಗಳೊಳಗೂ ಅವುಗಳ ಪ್ರಭಾವ ಕಾಣಲಾರಂಭಿಸಿತು. ಕೆಲವು ಪಕ್ಷಗಳಂತೂ ಕುರುಡು ಕಂದಾಚಾರದ, ಪುನರುತ್ಥಾನವಾದೀ ವಿಚಾರಗಳ ಆಧಾರದ ಮೇಲೆನೆ ಹುಟ್ಟಿಕೊಂಡವು.

ಕೋಮುವಾದ ಜಾತ್ಯತೀತತೆ

ಸ್ವಾತಂತ್ರ್ಯ ಹೋರಾಟ ಮೂಡಿ ಬರುತ್ತಿದ್ದಾಗ, ರಾಷ್ಟ್ರೀಯ ಭಾವನೆಯ ಬೆಳವಣಿಗೆಯ ಜೊತೆಗೇ ಪುನರುತ್ಥಾನವಾದೀ ಭಾವನೆಗಳೂ ಬೆಳೆದು ಬಂದವು ಎಂಬುದನ್ನು ನಾವು ಗಮನದಲ್ಲಿಟ್ಟುಕೊಳ್ಳಬೇಕು. ತಿಲಕರು ಆರಂಭಿಸಿದ ಗಣೇಶೋತ್ಸವ ಮುಂತಾದ ರಾಜಕೀಯ ಧಾರ್ಮಿಕ ಆಚರಣೆಗಳು, ಗಾಂಧೀಜಿಯವರ 'ಹಿಂದ್ ಸ್ವರಾಜ್' ನಲ್ಲಿ ಪುರಾತನ ಗ್ರಾಮ ಪದ್ಧತಿಯನ್ನು ಪುನರುಜ್ಜೀವನಗೊಳಿಸುವ ವಿಚಾರ ರಾಮ ರಾಜ್ಯದ ಪರಿಕಲ್ಪನೆ ವಂದೇ ಮಾತರಂನ್ನು ರಾಷ್ಟ್ರೀಯ ಗೀತೆಯಾಗಿ ಅಂಗೀಕರಿಸಿದ್ದು ಮುಂತಾದವು ಇದಕ್ಕೆ ಕೆಲವು ಉದಾಹರಣೆಗಳು ಇದು ಹಿಂದೂ ಪುನರುತ್ಥಾನ ವಾದವಾಗಿದ್ದರಿಂದ ಇದಕ್ಕೆಪ್ರತಿಕ್ರಿಯೆಯಾಗಿಅಲ್ಪಸಂಖ್ಯಾತರ ಮುಸ್ಲಿಂ ಪುನರುತ್ಥಾನವಾದ ಸಿಖ್ ಪುನರುತ್ಥಾನವಾದ ಹುಟ್ಟಿಕೊಂಡಿತು. ಯಾಕೆಂದರೆ ಇವರೆಲ್ಲರೂ ಕೂಡಾ ಹಿಂದೂಗಳಂತೆ ಹೇಳಿಕೊಳ್ಳಬಹುದಾದ "ಭವ್ಯ ಪರಂಪರೆ" ಗಳಿದ್ದವು ತಾನೇ? ಕೋಮುವಾದ ಹುಟ್ಟಿಕೊಂಡಿದ್ದು ಈ ಸನ್ನಿವೇಶದಲ್ಲಿ ಸ್ವಾತಂತ್ರ್ಯ ಹೋರಾಟ ನೇತೃತ್ವದಲ್ಲಿದ್ದ ಕಾಂಗ್ರೆಸ್ ಪಕ್ಷದ ಮುಖಂಡರು ವಿವಿಧ ಕೋಮುಗಳ ದೃಷ್ಟಿಕೋನವನ್ನು ಆಧುನಿಕಗೊಳಿಸುವ ಬದಲು ಅವುಗಳ ಪುನರುತ್ಥಾನವಾದಿ ಭಾವನೆಗಳಲ್ಲಿ ಪರಸ್ಪರ ಹೊಂದಾಣಿಕೆ ತರಲಷ್ಟೇ ಪ್ರಯತ್ನಿಸಿದರು.

ಸ್ವಾತಂತ್ರ್ಯೋತ್ತರ ಭಾರತದಲ್ಲೂ ಜಾತ್ಯತೀತತೆಯ ಪರಿಕಲ್ಪನೆಯನ್ನು ವಿಕೃತಗೊಳಿಸಿ ಈ ಪ್ರಕ್ರಿಯೆಯನ್ನು ಮುಂದುವರಿಸಲಾಯಿತು. ಕಾಂಗ್ರೆಸ್ಸಿಗರ ಪ್ರಕಾರ ಜಾತ್ಯಾತೀತತೆಯೆಂದರೆ ರಾಜಕೀಯವನ್ನು ಮತಧರ್ಮಗಳಿಂದ ಪೂರ್ಣವಾಗಿ ಪ್ರತ್ಯೇಕಗೊಳಿಸುವುದು ಎಂದಲ್ಲ: ಬದಲಾಗಿ, ಎಲ್ಲಾಮತಧರ್ಮಗಳಿಗೂ ರಾಜಕೀಯದಲ್ಲಿ ಮೂಗು ತೂರಿಸಿ ಕೈವಾಡ ನಡೆಸಲು ಸಮಾನ ಸ್ವಾತಂತ್ರ್ಯ ನೀಡುವುದು! ತಮ್ಮ ಹಿತಾಸಕ್ತಿಗಳಿಗಾಗಿ ವಿವಿಧ ದೇಶೀಯ ಗುಂಪುಗಳು ಹಾಗೂ ಕೋಮುಗಳ ನಡುವೆ ವಿರಸ ಹುಟ್ಟಿಸಿ, ಪ್ರಜಾಪ್ರಭುತ್ವವಾದೀ ಚಳುವಳಿಯನ್ನು ಮುರಿಯಲು ಕೂಡಾ ಕಾಂಗ್ರೆಸ್ಸಿಗರು ತಮ್ಮ 'ಜಾತ್ಯಾತೀತತೆ'ಯ ಪರಿಕಲ್ಪನೆಯನ್ನು ಬಳಸಿಕೊಂಡದ್ದು ಈಗಎಲ್ಲರಿಗೂ ತಿಳಿದಿರುವ ಸಂಗತಿ.

ಜಾತಿವಾದಿ, ಕೋಮುವಾದಿ, ಪ್ರತ್ಯೇಕತಾವಾದೀ ಶಕ್ತಿಗಳಿಗೆಶೈಕ್ಷಣಿಕ ಸಂಸ್ಥೆಗಳ ಮೇಲೆ ಹತೋಟಿಯಲ್ಲಿಡಲು ಅವಕಾಶನೀಡಿದ್ದು ಕಾಂಗ್ರೆಸ್‌ಜಾತ್ಯತೀತತೆಯ ಇನ್ನೊಂದು ವಿಫಲತೆ. ಶಿಕ್ಷಣವನ್ನು ಹೆಚ್ಚು-ಹೆಚ್ಚು ಖಾಸಗೀ ಕೈಗಳಿಗೆ ನೀಡಬಯಸುವ ಹೊಸ ಶಿಕ್ಷಣ ನೀತಿ ಈ ಪ್ರತಿಕ್ರಿಯೆಯನ್ನು ಇನ್ನಷ್ಟು ಬಲಗೊಳಿಸಲಿದೆ.

ಪಾಶ್ಚಿಮಾತ್ಯ ಬಂಡವಾಳಶಾಹೀ ದೇಶಗಳ ಆರ್ಥಿಕ ನೆರವಿನ ಮೂಲಕ ಅವರ ಸಾಮ್ರಾಜ್ಯಶಾಹೀ ಸಂಸ್ಕೃತಿಯೂ ನಮ್ಮ ದೇಶವನ್ನು ತೂರಿಬಂದು ನಮ್ಮ ಸಾಮ್ರಾಜ್ಯಶಾಹೀ ವಿರೋಧಿ ಪರಂಪರೆಯನ್ನು ರಾಷ್ಟ್ರೀಯ ದೃಷ್ಟಿಕೋನವನ್ನು ಕುಂಠಿತಗೊಳಿಸುತ್ತವೆ. ಎಂದು ಎರಡು ದಶಕಗಳ ಹಿಂದೆಯೇ ಸಿ. ಪಿ. ಐ.(ಎಂ)ನ ಕಾರ್ಯಕ್ರಮ ಸ್ಪಷ್ಟವಾಗಿ ಎಚ್ಚರಿಸಿತ್ತು. ದೇಶದ ವಾಯುವ್ಯ ಹಾಗೂ ಈಶಾನ್ಯ ಭಾಗಗಳಲ್ಲಿ ಮುಖ್ಯತಃ ಅಮೆರಿಕನ್ ಸಾಮ್ರಾಜ್ಯಶಾಹಿಗಳ ಕೈವಾಡ ಈ ಎಚ್ಚರಿಕೆಯ ಸತ್ಯತೆಯನ್ನು ಈಗಂತೂ ಕಣ್ಣಿದ್ದವರಿಗೆಲ್ಲಾ ಮನಗಾಣಿಸಿ ಕೊಟ್ಟಿದೆ.

ಪರಿಹಾರ ಕಾಣದ ದೇಶಾ ಭಾಷಾ ಜನಾಂಗಗಳ ಸಮಸ್ಯೆ

ಹಲವಾರು ದೇಶೀಯ ಗುಂಪುಗಳಿಂದ ಸೇರಿದ ಭಾರತದ ದೇಶೀಯ ಜನಾಂಗಗಳ ಸಮಸ್ಯೆಯನ್ನು ಪರಿಹರಿಸುವಲ್ಲಿ ಕಾಂಗ್ರೆಸ್ ಸರ್ಕಾರಗಳ ವಿಫಲತೆ ವಿಚ್ಛಿದ್ರಕಾರಿಗಳಿಗೆ ಸುವರ್ಣಾವಕಾಶ ನೀಡಿದೆ ಇನ್ನೊಂದು ಪ್ರಮುಖ ಅಂಶ. ಆಳುವ ವರ್ಗಗಳ ಈ ಕ್ಷೇತ್ರದಲ್ಲೂ ವಿಫಲವಾಗಲು ಅದರ ಸಂಕುಚಿತ ವರ್ಗದೃಷ್ಟಿಕೋನ ಕಾರಣ ಎಂದು ಬೇರೆ ಹೇಳಬೇಕಾಗಿಲ್ಲ.

[5ನೇ ಪುಟ ನೋಡಿ]

(4ನೇ ಪುಟದಿಂದ)

ದೇಶೀಯ ಸಮಸ್ಯೆಯಲ್ಲಿ ಮೂರು ಮುಖ್ಯ ಸಂಗತಿಗಳಿವೆ.

1. ಎಲ್ಲಾ ದೇಶಭಾಷೆಗಳಿಗೆ ಸಮಾನತೆ. 2. ಕೇಂದ್ರ ರಾಜ್ಯ ಸಂಬಂಧಗಳು ಮತ್ತು. 3. ಅಭಿವೃದ್ಧಿಯಲ್ಲಿ ಪ್ರಾದೇಶಿಕ ಸಮತೋಲನ.

ಸ್ವಾತಂತ್ರ್ಯ ಹೋರಾಟ ಕಾಲದಲ್ಲಿ ಬ್ರಿಟಿಷ್ ಸರ್ಕಾರದೊಂದಿಗೆ ಚೌಕಾಸಿ ಸಾಮರ್ಥ್ಯವನ್ನು ಹೆಚ್ಚಿಸಿಕೊಳ್ಳಲು ರೈತರು ಹಾಗೂ ಕಾರ್ಮಿಕರನ್ನು ಆಂದೋಲನದಲ್ಲಿ ತೊಡಗಿಸಬೇಕಾದಾಗ ಹೋರಾಟ ಬೂರ್ಜ್ವಾ ಮುಂದಾಳು ಭಾರತದ ಬಹು ಭಾಷಾ ರಚನೆಯನ್ನು ಒಪ್ಪಿಕೊಂಡು 1928 ರಲ್ಲೇ ಭಾಷಾವಾರು ಪ್ರಾಂತ್ಯ ರಚನೆಯ ಸಲಹೆ ಅಂಗೀಕರಿಸಿದ್ದರು. ಆದರೆ ಸ್ವಾತಂತ್ರ್ಯದ ಮರುಕ್ಷಣವೇ ಕಾಂಗ್ರೆಸ್ ತನ್ನ ನಿಲುವು ಬದಲಾಯಿಸಿತು ಭಾಷಾವಾರು ಪ್ರಾಂತ್ಯಗಳ ರಚನೆಯ ಪ್ರಶ್ನೆಯಿಂದ ತಪ್ಪಿಸಿಕೊಳ್ಳಲು ಪ್ರಯತ್ನಿಸಿತು. ಭಾಷಾವಾರು ಪ್ರಾಂತ್ಯಗಳಿಗಾಗಿ ನಡೆದ ಆಂದೋಲನಗಳ ವಿರುದ್ಧ ನಿರ್ಧಯ ದಮನ ಕ್ರಮಕೈಗೊಂಡಿತು. 1956ರಲ್ಲಿ ಆಂಧ್ರ ಪ್ರದೇಶ, ಕರ್ನಾಟಕ, ಕೇರಳದ ರಚನೆಗೆ ಒಪ್ಪಬೇಕಾಗಿ ಬಂದ ಮೇಲೂ ಮಹಾರಾಷ್ಟ್ರ, ಗುಜರಾತ್‌ನ ಜನಗಳು ಮತ್ತೂ 5 ವರ್ಷ ಕಾಯಬೇಕಾಗಿ ಬಂತು ಮಾತ್ರವಲ್ಲ ಮುಂಬೈಯಲ್ಲಿ ಒಂದೇ ರಾತ್ರಿಯಲ್ಲಿ ನೂರು ಮಂದಿ ಪೋಲೀಸ್ ಗುಂಡುಗಳಿಗೆ ಆಹುತಿಯಾಗಬೇಕಾಗಿ ಬಂತು.

ಭಾಷೆಗಳ ಸಮಾನತೆಯ ಪ್ರಶ್ನೆಯಲ್ಲೂ ಇದೇ ನಿಲುವು ಹಿಂದೀ ಭಾಷೆಯನ್ನು ಇತರರ ಮೇಲೆ ಹೇರುವ ಪ್ರಯತ್ನಕ್ಕೆ, ತೀವ್ರ ಪ್ರತಿರೋಧ ಬಂದಾಗಲೂ ಅದನ್ನು ಪರಿಹರಿಸಲು ಯತ್ನಿಸಿದ್ದು ಎಲ್ಲಾ ಭಾಷೆಗಳಿಗೆ ಸಮಾನ ಸ್ಥಾನಮಾನ ನೀಡುವ ಮೂಲಕವಲ್ಲ ಇಂಗ್ಲೀಷ್‌ಗೆ ಹಿಂದಿಯೊಂದಿಗೆ ಸಮಾನಸ್ಥಾನಮಾನ ನೀಡುವ ಮೂಲಕವಷ್ಟೇ ದುರುದೃಷ್ಟವೆಂದರೆ ಹಿಂದಿಯ ಹೇರಿಕೆಯನ್ನು ವಿರೋಧಿಸುತ್ತಿದ್ದವರು. ಇಂಗ್ಲೀಷ್‌ಗು ಆ ಸ್ಥಾನ ಕೊಟ್ಟ ಮೇಲೆ ತೃಪ್ತರಾಗಿಬಿಟ್ಟರು. ತಮ್ಮ ಭಾಷೆಗಳಿಗೂ ಸಮಾನ ಸ್ಥಾನಮಾನ ಕೇಳಲೇ ಇಲ್ಲ. ಆದ್ದರಿಂದ ಸಮಸ್ಯೆ ಪರಿಹಾರವಾಗುವ ಬದಲು ಇನ್ನಷ್ಟು ಉಲ್ಬಣಗೊಂಡಿತು. ಭಾಷಾಂಧತೆ ಬೆಳೆಯಲು ಅನುವು ಮಾಡಿಕೊಟ್ಟಿತು.

ಕೇಂದ್ರ ರಾಜ್ಯ ಸಂಬಂಧಗಳಲ್ಲೂ ಕೇಂದ್ರದಲ್ಲಿ ಹೆಚ್ಚೆಚ್ಚು ಅಧಿಕಾರಗಳನ್ನು ಕೇಂದ್ರೀಕರಿಸುತ್ತಾ, ರಾಜ್ಯ ಸರ್ಕಾರಗಳ ಅಧಿಕಾರ ವ್ಯಾಪ್ತಿಯನ್ನು ಮೊಟಕುಗೊಳಿಸುತ್ತಾ ಪ್ರಜಾಪ್ರಭುತ್ವವಾದೀ ಪ್ರಕ್ರಿಯೆಗೆ ಉಂಟುಮಾಡುತ್ತಿರುವ ಹಾನಿ ರಾಜ್ಯಗಳಲ್ಲಿ ಅಸಂತೃಪ್ತಿಯನ್ನು ಹೆಚ್ಚಿಸುತ್ತಿದೆ. ಪ್ರತ್ಯೇಕತಾ ಭಾವನೆಯನ್ನು ಬಿತ್ತುವವರಿಗೆ ವಿಫಲ ಅವಕಾಶ ಒದಗಿಸಿಕೊಡುತ್ತಿದೆ. ರಾಜ್ಯ ಶಾಸಕಾಂಗಗಳು ಅಂಗೀಕರಿಸಿದಎಷ್ಟೋ ಠರಾವುಗಳು ರಾಷ್ಟ್ರಪತಿಗಳ ಅನುಮತಿಗೆ ವರ್ಷಗಟ್ಟಲೆ ಕಾಯಬೇಕಾದ ಸ್ಥಿತಿ ಪರಿಸ್ಥಿತಿಯನ್ನು ಉಲ್ಬಣಗೊಳಿಸುತ್ತಿದೆ.

ಪ್ರಜಾಪ್ರಭುತ್ವ ಯಾವುದೇ ಅಸಮಾನತೆ ಅಸಂತೃಪ್ತಿ ಸೃಷ್ಟಿಸುತ್ತದೆ. ಪ್ರಜಾಪ್ರಭುತ್ವ ಚಳುವಳಿ ದುರ್ಬಲವಾಗಿರುವಲ್ಲಿ ಈ ಅಸಂತೃಪ್ತಿಯನ್ನು ವಿಚ್ಛಿದ್ರಕಾರೀ ಮಾರ್ಗ ದತ್ತ ಸೆಳೆಯುವುದು ಕಷ್ಟದ ಕೆಲಸವೇನಲ್ಲ. ಸಮಾಜದ ಪ್ರತಿಗಾಮೀ ಶಕ್ತಿಗಳು ಇಂತಹ ಅವಕಾಶಕ್ಕಾಗಿ ಕಾದುಕೊಂಡಿರುತ್ತವೆ. ಪ್ರಜಾಪ್ರಭುತ್ವ ಪ್ರಜ್ಞೆಯಲ್ಲಿ ಹಿಂದುಳಿದ ಜನ ವಿಭಾಗಗಳು ಅವಕ್ಕೆ ಬಲಿಯಾಗುತ್ತವೆ. ನಮ್ಮ ದೇಶದಲ್ಲಿನಾವೀಗ ಕಾಣುತ್ತಿರುವುದು ಇದೇ ಪ್ರಕ್ರಿಯೆಯನ್ನು.

ಸಿ.ಪಿ.ಐ.(ಎಂ) ಹಾಗೂ ಇತರ ಎಡಪಕ್ಷಗಳು ಈ ವಾಸ್ತವಿಕತೆಯ ಬಗ್ಗೆ ಸದಾ ಎಚ್ಚರನೀಡುತ್ತಾ ಐಕ್ಯತೆಗಾಗಿ ಹೋರಾಡುತ್ತಾ ಬಂದಿವೆ. ಆದರೆ ಆಳುವ ವರ್ಗಗಳ ಪಕ್ಷಗಳು, ಮುಖ್ಯವಾಗಿ ಆಳುವ ಪಕ್ಷ ಮಾತ್ರ ಅನುಭವದಿಂದ ಪಾಠ ಕಲಿಯಲು ನಿರಾಕರಿಸುತ್ತಿದೆ. ದೇಶದ ಐಕ್ಯತೆ ಮತ್ತು ಸಮಗ್ರತೆಗೆ ಹೆಚ್ಚುತ್ತಿರುವ ಅಪಾಯದಲ್ಲಿ ಒಂದು ಬಹು ದೊಡ್ಡದು ಇದೇ.

ನಮ್ಮ ಕಾಲದ ರಾಷ್ಟ್ರೀಯ ವಿಮೋಚನಾ ಹೋರಾಟಗಳ ಚಾರಿತ್ರಿಕ ಅನುಭವವೆಂದರೆ ಸ್ವಾತಂತ್ರ್ಯ ಹೋರಾಟದ ನಾಯಕತ್ವವನ್ನು ಬಂಡವಾಳಶಾಹಿ ವಹಿಸಿದಾಗ, ಅದು ರಾಷ್ಟ್ರೀಯ ಪ್ರಜಾಪ್ರಭುತ್ವ ಕ್ರಾಂತಿಯನ್ನು ಪೂರ್ಣಗೊಳಿಸುವುದಿಲ್ಲ ಎಂಬುದು. ಬದಲಾಗಿ, ರಾಜಕೀಯ ಸ್ವಾತಂತ್ರವನ್ನು ಪಡೆದ ಬಳಿಕ ಸಾಮಾಜಿಕ ವೈರುಧ್ಯಗಳು ತೀವ್ರಗೊಂಡಂತೆ ಸಾಮ್ರಾಜ್ಯಶಾಹಿಯೊಂದಿಗೆ ರಾಜಿ ಮಾಡಿಕೊಳ್ಳುವ ಪ್ರವೃತ್ತಿಯನ್ನು ತೋರಿಸುತ್ತದೆ. ಮತ್ತು ದೇಶೀಯ ಪ್ರತಿಗಾಮೀ ಜಮೀನ್ದಾರರೊಂದಿಗೆ ಸಖ್ಯ ಬೆಳೆಸುತ್ತದೆ. ಚಾರಿತ್ರಿಕ ಅನುಭವವು ಇಷ್ಟೇ ಖಚಿತವಾಗಿ ಇನ್ನೊಂದು ಸಂಗತಿಯನ್ನು ತೋರಿಸಿಕೊಟ್ಟಿದೆ. ಸಾಮ್ರಾಜ್ಯಶಾಹಿ– ವಿರೋಧಿ ರಾಷ್ಟ್ರೀಯ ರಂಗವು ಕಾರ್ಮಿಕ ವರ್ಗದ ನೇತೃತ್ವದಲ್ಲಿದ್ದಾಗ ಮಾತ್ರವೇ ಪ್ರಜಾಪ್ರಭುತ್ವ ಕ್ರಾಂತಿಯು ಅದರ ಎಲ್ಲಾ ಹಂತಗಳಲ್ಲೂ ಪೂರ್ಣಗೊಳ್ಳುವುದಲ್ಲದೆ ಕ್ರಾಂತಿಯು ಪ್ರಜಾಪ್ರಭುತ್ವ ಹಂತದಲ್ಲೇ ಉಳಿಯದೆ ತ್ವರಿತವಾಗಿ ಸಮಾಜವಾದಿ ಕ್ರಾಂತಿಯ ಹಂತಕ್ಕೆ ದಾಟುತ್ತದೆ. ಭಾರತದ ಅಸಂಪೂರ್ಣ ಕ್ರಾಂತಿ ಕೂಡಾ ಈ ಚಾರಿತ್ರಿಕ ಅನುಭವವನ್ನು ದೃಢೀಕರಿಸುತ್ತದೆ.

—ಸಿ.ಪಿ.ಐ. (ಎಂ) ಕಾರ್ಯಕ್ರಮ
ಅಕ್ಟೋಬರ್ 1964

ನಾಲ್ಕು ದಶಕಗಳು — ಎರಡು ವ್ಯವಸ್ಥೆಗಳು

ಭಾರತ - ಚೀನಾ

ನಮ್ಮ ದೇಶ ಬ್ರಿಟಿಶ್ ವಸಾಹತುಶಾಹಿಯಿಂದ ವಿಮುಕ್ತಿ ಪಡೆದು ಇಂದಿಗೆ ಸರಿಯಾಗಿ ನಲ್ವತ್ತು ವರ್ಷಗಳು ಪೂರ್ಣಗೊಂಡಿದೆ. ಈ ನಾಲ್ಕು ದಶಕಗಳಲ್ಲಿ ನಾವು ಏನು ಸಾಧಿಸಿದ್ದೇವೆ ಮತ್ತು ಏನು ಸಾಧಿಸಬಹುದಾಗಿತ್ತು ಎಂಬುದರ ಪರಿಶೀಲನೆಗೆ ಇದು ಸೂಕ್ತ ಸಂದರ್ಭ. ಬೂರ್ಜ್ವಾ ನೇತೃತ್ವದ ಸಾಮ್ರಾಜ್ಯಶಾಹೀ ವಿರೋಧಿ ಹೋರಾಟದ ಫಲವಾಗಿ ಭಾರತ ಸ್ವಾತಂತ್ರ್ಯ ಪಡೆದ ಎರಡು ವರ್ಷಗಳ ನಂತರ ನಮ್ಮ ನೆರೆಯ ದೇಶವಾದ ಚೀಣಾ ದುಡಿಯುವ ವರ್ಗದ ಪಕ್ಷದ ನೇತೃತ್ವದಲ್ಲಿ ಆಂತರಿಕ ಹಾಗೂ ವಸಾಹತುಶಾಹೀ ಶೋಷಕರಿಂದ ವಿಮೋಚನೆ ಪಡೆಯಿತು. ಭಾರತ ಕಾಂಗ್ರೆಸ್ ಪಕ್ಷದ ನೇತೃತ್ವದಲ್ಲಿ ಬಂಡವಾಳಶಾಹೀ ಮಾರ್ಗಹಿಡಿಯಿತು. ಚೀಣಾ ಕಮ್ಯೂನಿಸ್ಟ್ ಪಕ್ಷದ ನೇತೃತ್ವದಲ್ಲಿ ಸಮಾಜವಾದೀ ಮಾರ್ಗಹಿಡಿಯಿತು. ನಂತರದ ನಾಲ್ಕು ದಶಕಗಳ ಸಾಧನೆಗಳ ಕೆಲವು ಅಂಕಿ ಅಂಶಗಳು ಒಂದು ಸ್ಥೂಲ ಹೋಲಿಕೆ ಇಲ್ಲಿದೆ.

ರಾಷ್ಟ್ರೀಯ ಆದಾಯ

ಭಾರತದ ರಾಷ್ಟ್ರೀಯ ಆದಾಯ 1950–51 ರಿಂದ 1983–84ರ ಅವಧಿಯಲ್ಲಿ ಸರಾಸರಿಯಾಗಿ 3.6% ವಾರ್ಷಿಕ ದರದಲ್ಲಿ ವೃದ್ಧಿ ಹೊಂದಿತು. ಸುಮಾರು ಇದೇ ಅವಧಿಯಲ್ಲಿ ಚೀಣಾದ ರಾಷ್ಟ್ರೀಯ ಆದಾಯ 7.1% ವಾರ್ಷಿಕ ದರದಲ್ಲಿ ಹೆಚ್ಚಿತು. ಕೆಲವು ಕಾಲಘಟ್ಟಗಳಲ್ಲಿ ಎರಡು ದೇಶಗಳ ರಾಷ್ಟ್ರೀಯ ಆದಾಯ ಮತ್ತು ತಲಾ ಆದಾಯದ ಹೆಚ್ಚಳದ ದರಗಳು ಹೀಗಿವೆ.

ವರ್ಷ		ರಾಷ್ಟ್ರೀಯ ಆದಾಯ ದರ (%)		ತಲಾ ಆದಾಯ ದರ (%)	
ಭಾರತ	ಚೀನಾ	ಭಾರತ	ಚೀನಾ	ಭಾರತ	ಚೀನಾ
1950–65	1952–65	3.3	5.4	1.2	4.9
1965–75	1965–75	4.0	6.9	1.7	3.5
1975–81	1975–81	3.9	5.8	1.1	6.2

ಕೈಗಾರಿಕಾ ಉತ್ಪಾದನೆ

ಭಾರತದ ಕೈಗಾರಿಕಾ ಉತ್ಪಾದನೆಯ ಹೆಚ್ಚಳದ ವಾರ್ಷಿಕ ದರ ಮೊದಲ 14ವರ್ಷ 8%, ನಂತರ ಏಳೆಂಟುವರ್ಷಗಳ ಕಾಲ ಸ್ಥಗಿತತೆ 1971-81 ರಲ್ಲಿ 4%, 1981-85ರಲ್ಲಿ 6./. ಇತ್ತು. ಅಂದರೆ ಸರಾಸರೀ ವಾರ್ಷಿಕ ಸುಮಾರು 4.7./. ಆಗುತ್ತದೆ. ಚೀಣಾದ ಕೈಗಾರಿಕಾ ಉತ್ಪಾದನೆ 32 ವರ್ಷಗಳಲ್ಲಿ 47 ಪಟ್ಟು ಹೆಚ್ಚಿತು. ಅಂದರೆ ಸರಾಸರಿ ವಾರ್ಷಿಕ ವೃದ್ಧಿದರ 12:9./. ಕೆಲವು ಪ್ರಮುಖ ಕೈಗಾರಿಕೆಗಳ ಅಂಕಿ ಅಂಶಗಳು ಇಲ್ಲಿವೆ.

ಉತ್ಪಾದನೆ	ವರ್ಷ(ಭಾರತ)	1950–51	1960–61	1970-71	1980–81
	ವರ್ಷ (ಚೀನಾ)	1949	1957	1965	1981
ಕಲ್ಲಿದ್ದಲು	ಭಾರತ	328	557	763	1188
(ಲಕ್ಷಟನ್)	ಚೀನಾ	320	1310	2320	6220
ಉಕ್ಕು	ಭಾರತ	25.1	58.1	106.2	166.1
(ಲಕ್ಷಟನ್)	ಚೀನಾ	1.58	53.5	122.3	356.0
ವಿದ್ಯುಚ್ಛಕ್ತಿ	ಭಾರತ	530	1690	5580	11080
(ಕೋಟಿ ಕಿ.ವಾಟ್)	ಚೀನಾ	430	1930	6760	30930
ಸಿಮೆಂಟ್	ಭಾರತ	27.3	79.7	143.0	186.0
(ಲಕ್ಷಟನ್)	ಚೀನಾ	6.6	68.6	163.4	829.0
ಕಾಗದ	ಭಾರತ	0.12	1.01	3.71	5.78
(ಲಕ್ಷಟನ್)	ಚೀನಾ	1.10	9.10	17.30	54.00
ಸಕ್ಕರೆ	ಭಾರತ	11.3	30.3	37.4	51.5
(ಲಕ್ಷಟನ್)	ಚೀನಾ	2.0	8.6	14.6	31.7
ಹತ್ತಿ ಬಟ್ಟೆ	ಭಾರತ	422	672	777	964
(ಕೋಟಿ ಮೀಟರ್)	ಚೀನಾ	189	505	628	1427
ಕಚ್ಚಾ ಪೆಟ್ರೋಲಿಯಂ	ಭಾರತ	0.2	58.0	171.0	241.0
(ಲಕ್ಷ ಟನ್)	ಚೀನಾ	1.2	14.6	113.1	1012.20
ಸೈಕಲ್‌ಗಳು	ಭಾರತ	9.91	20.42	41.89	47.81
(ಲಕ್ಷಗಳಲ್ಲಿ)	ಚೀನಾ	0.14	8.06	18.38	17.443
ರಾಸಾಯನಿಕ ಗೊಬ್ಬರ	ಭಾರತ	1.19	5.18	21.12	30.60
(ಲಕ್ಷ ಟನ್)	ಚೀನಾ	0.06	1.51	17.26	123.90

ಕೃಷಿ ಉತ್ಪಾದನೆ

1949-50 ರಿಂದ 1983-84ರ ಅವಧಿಯಲ್ಲಿ ಕೃಷಿ ಉತ್ಪಾದನೆಯ ವೃದ್ಧಿಯ ವಾರ್ಷಿಕದರ 2.6./. ಹಸಿರು ಕ್ರಾಂತಿಯ ನಂತರದ ಅವಧಿಯಲ್ಲಿ ಈ ದರ 2.59./. ಚೀಣಾದಲ್ಲಿ 1949-1981ರ ಅವಧಿಯಲ್ಲಿ ಈ ದರ 4.4./. ಭಾರತದಲ್ಲಿ ಕೃಷಿಯೋಗ್ಯ ಜಮೀನು ಸುಮಾರು 14 ಕೋಟಿ ಹೆಕ್ಟೇರ್, ಚೀಣಾದಲ್ಲಿ ಜನಸಂಖ್ಯೆ ವಿಫುಲವಾಗಿದ್ದರೂ ಕೃಷಿಯಭೂಮಿ ಇದಕ್ಕಿಂತ ಕಮ್ಮಿ, ಅಂದರೆ 10 ಕೋಟಿ ಹೆಕ್ಟೇರ್ ಎಂಬುದು ಗಮನಾರ್ಹ. ಈ ಕಡಿಮೆ ಜಮೀನಿನಲ್ಲಿ ಅವರು ಬೆಳೆಯುವ ಫಸಲು ಮೂಗಿನ ಮೇಲೆ ಬೆರಳಿಡುವಂತಹದು ಕಾರಣ ಒಂದೇ ಒಂದು- ಭೂ ಸುಧಾರಣೆ.

[6ನೇ ಪುಟ ನೋಡಿ]

ಅಂಗಡಿ ಬಂದ್ ಜನವಿರೋಧಿ ಕ್ರಮ ಪಕ್ಷದ ಖಂಡನೆ

ರಾಜ್ಯ ಸರ್ಕಾರವು ಆಗಸ್ಟ್ 1 ರಿಂದ ಬೆಂಗಳೂರು ಮಹಾನಗರದಲ್ಲಿ ರಾತ್ರಿ 8 ಗಂಟೆಯೊಳಗೆ ಎಲ್ಲಾ ವ್ಯಾಪಾರ ವಹಿವಾಟನ್ನು ನಿಲ್ಲಿಸಿ ಅಂಗಡಿಗಳನ್ನು ಮುಚ್ಚಬೇಕೆಂಬ ನಿಯಮವನ್ನು ಜಾರಿಗೆ ತಂದಿರುವುದನ್ನು ಭಾರತ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಬೆಂಗಳೂರು ಜಿಲ್ಲಾ ಸಮಿತಿಯು ವಿರೋಧಿಸಿದೆ.

ಸರ್ಕಾರದ ಈ ನಿರ್ಧಾರದಿಂದ ಜನಸಾಮಾನ್ಯರಿಗೆ ಹಾಗೂ ಸಣ್ಣ ಪುಟ್ಟ ವ್ಯಾಪಾರೋದ್ಯಮಿಗಳಿಗೆ ಬಹಳತೊಂದರೆಯುಂಟಾಗಿದೆ. ಈ ಕ್ರಮದ ಮೂಲಕ ಸಮಾಜ ವಿರೋಧಿ ಚಟುವಟಿಕೆಗಳನ್ನು ಹತೋಟಿಗೆ ತರುವುದಾಗಿ ಸರ್ಕಾರವು ಹೇಳಿಕೊಂಡಿದ್ದರೂ ವಾಸ್ತವವಾಗಿ ಈಗ ಅಂತಹ ಚಟುವಟಿಕೆಗಳಿಗೆ ಹೆಚ್ಚಿನ ಅವಕಾಶ ದೊರೆತಂತಾಗಿದೆ. ಮಹಿಳೆಯರು ತಮ್ಮ ಕೆಲಸ ಕಾರ್ಯಗಳನ್ನು ಮುಗಿಸಿಕೊಂಡು ರಾತ್ರಿಯ ವೇಳೆ ತಮ್ಮ ಮನೆಗಳಿಗೆ ಭಯದಲ್ಲಿ ಹಿಂತಿರುಗಬೇಕಾದ ಪರಿಸ್ಥಿತಿಯುಂಟಾಗಿದೆ. ವಿದ್ಯುತ್‌ಚ್ಛಕ್ತಿಯನ್ನು ಉಳಿತಾಯ ಮಾಡಲು ಈ ಅಪ್ರಾಯೋಗಿಕವಾದ ಕ್ರಮದ ಬದಲು ವಿದ್ಯುಚ್ಛಕ್ತಿ ಪೋಲಾಗುವುದನ್ನು ತಡೆಗಟ್ಟಲು ಪ್ರಯತ್ನಿಸಬಹುದಾಗಿದೆ. ಸರ್ಕಾರವು ಕೂಡಲೇ ಈ ಆಜ್ಞೆಯನ್ನು ಹಿಂತೆಗೆದುಕೊಳ್ಳಬೇಕೆಂದು ಸಿ.ಪಿ.ಐ.[ಎಂ] ಜಿಲ್ಲಾ ಸಮಿತಿ ಸರ್ಕಾರವನ್ನು ಒತ್ತಾಯಿಸಿದೆ.

ಪಕ್ಷದ ಶ್ರೀರಾಮಪುರ, ಯಶವಂತಪುರ ಸ್ಥಳೀಯ ಘಟಕಗಳು ಈಗಾಗಲೇ ಹೋರಾಟವನ್ನು ಹಮ್ಮಿಕೊಂಡು ಜನಾಭಿಪ್ರಾಯ ಸಂಗ್ರಹಿಸುತ್ತಿವೆ. ಪತ್ರಿಕಾ ಹೇಳಿಕೆಯಲ್ಲಿ ತಿಳಿಸಲಾಗಿದೆ. ●

ಎಸ್.ಎಫ್.ಐ. ರಾಜ್ಯ ಸಮಿತಿ ಸಭೆಯ ತೀರ್ಮಾನಗಳು

ಬಳ್ಳಾರಿ ಜಿಲ್ಲೆಯ ಹೊಸ ಪೇಟೆಯಲ್ಲಿ ಜುಲೈ 27ರಂದು ಎಸ್.ಎಫ್.ಐ. ರಾಜ್ಯ ಸಮಿತಿ ಸಭೆ ಸೇರಿತು. ಅಖಿಲ ಭಾರತ ಉಪಾಧ್ಯಕ್ಷರಾದ ಕೃಷ್ಣಯ್ಯ ಸಭೆಯಲ್ಲಿ ಉಪಸ್ಥಿತರಿದ್ದು ಮಾರ್ಗದರ್ಶನ ಮಾಡಿದರು.

ರಾಜ್ಯದ ಪ್ರಮುಖ 25 ಬೇಡಿಕೆಗಳನ್ನು ರಾಜ್ಯ ಸಮಿತಿಯು ಅಂತಿಮಗೊಳಿಸಿದ್ದು, ಇದರೊಂದಿಗೆ ಸ್ಥಳೀಯ ಸಮಸ್ಯೆಗಳನ್ನು ಸಮೀಕ್ಷಿಸಿ ಆಗಸ್ಟ್ 14 ರಂದುಬೇಡಿಕಾದಿನಾಚರಣೆ ಆಚರಿಸಲು ಘಟಕಗಳಿಗೆ ಕರೆ ಕೊಡಲಾಗಿದೆ. ನಂತರದ ಹಂತವಾಗಿ ಡಿ.ವೈ.ಎಫ್.ಐ. ಜೊತೆ ಸೇರಿ ಜಿಲ್ಲಾ ಮಟ್ಟದಲ್ಲಿ ದೊಡ್ಡ ರೀತಿಯಲ್ಲಿ ಚಳುವಳಿ ಕಾರ್ಯಕ್ರಮ ರೂಪಿಸಲಾಗುವುದು. ಸೆಪ್ಟೆಂಬರ್ 23ರಂದು ರಾಷ್ಟ್ರ ಮಟ್ಟದಲ್ಲಿ ನಡೆಯುವ 'ದೆಹಲಿ ಚಲೋ' ಕಾರ್ಯಕ್ರಮವನ್ನು ಯಶಸ್ವಿಗೊಳಿಸಲು ರಾಜ್ಯ ಮಟ್ಟದಲ್ಲಿ ಪೂರಕ ಕೆಲಸವನ್ನು ತಕ್ಷಣದಿಂದ ಆರಂಭಿಸಲು ಕರೆ ಕೊಡಲಾಗಿದೆ.

ಹಂಪೆಯಲ್ಲಿ ನಡೆದ ರಾಜ್ಯ ಮಟ್ಟದ ಶಿಬಿರದ ಮುಂದುವರಿಕೆಯಾಗಿ ಸ್ಥಳೀಯ ಶಿಬಿರಗಳನ್ನು ರಾಜ್ಯಾದ್ಯಂತ ಸುಮಾರು 50 ಕೇಂದ್ರಗಳಲ್ಲಿ ನಡೆಸಲು ನಿರ್ಧರಿಸಲಾಗಿದ್ದು ಇದರಲ್ಲಿ ಸುಮಾರು 3 ಸಾವಿರ ವಿದ್ಯಾರ್ಥಿಗಳಿಗೆ ತರಬೇತಿ ಕೊಡಲಾಗುವುದು.

ಕಾಲೇಜುಗಳಿಗೆ 'ಸ್ವಾಯತ್ತತೆ' ಕೊಡುವ ಜನ ವಿರೋಧಿ ಕೇಂದ್ರ ಸರಕಾರದ ಕ್ರಮದ ವಿರುದ್ಧ ಜನಾಭಿಪ್ರಾಯ ರೂಪಿಸಲು ಎಲ್ಲಾ ವಿಶ್ವವಿದ್ಯಾನಿಲಯ ಕೇಂದ್ರಗಳಲ್ಲಿ ವಿಚಾರ ಗೋಷ್ಠಿಗಳನ್ನು ನಡೆಸಲು ಕರೆಕೊಡಲಾಗಿದೆ.

40ನೇ ಸ್ವಾತ್ರಂತ್ರ್ಯೋತ್ಸವ ದಿನವಾದ ಆಗಸ್ಟ್ 15 ರಂದು ಡಿ.ವೈ.ಎಫ್.ಐ. ಜೊತೆ ಸೇರಿ 'ರಾಷ್ಟ್ರೀಯ ಸಮಗ್ರತಾ' ದಿನಾಚರಣೆಯ ಮಹತ್ವವನ್ನು ವಿವರಿಸುವ ಬೀದಿ ಬದಿಯ ಸಭೆ ಸಾರ್ವಜನಿಕ ಸಭೆ, ಪ್ರಭಾತ್ ಬೇರಿಗಳನ್ನು ನಡೆಸಲಾಗುವುದು.

ರಾಷ್ಟ್ರವ್ಯಾಪಿಯಾಗಿ ನಡೆಯುತ್ತಿರುವ ಶಿಕ್ಷಕರ ಅನಿರ್ಧಿಷ್ಟ ಮುಷ್ಕರಕ್ಕೆ ಹಾಗೂ ಸೆಪ್ಟೆಂಬರ್ ತಿಂಗಳಲ್ಲಿ ರಾಷ್ಟ್ರ ವ್ಯಾಪಿ ನಡೆಯುವ ರೈತರ ಜೈಲ್‌ಭರೋ ಕಾರ್ಯಕ್ರಮಕ್ಕೆ ಸಂಪೂರ್ಣ ಬೆಂಬಲ ಕೊಡುವ ನಿರ್ಣಯವನ್ನು ಅಂಗೀಕರಿಸಲಾಯಿತು.

ವಿದ್ಯಾರ್ಥಿ ವೇದಿಕೆ ಪತ್ರಿಕೆಗೆ ಚಂದಾ ನೊಂದಣಿ ಚುರುಕುಗೊಳಿಸಲು ಕರೆ ಕೊಡಲಾಗಿದೆ. ಆಗಸ್ಟ್ ತಿಂಗಳ ಸಂಚಿಕೆ ಹೊರತರಲಾಗುವುದು. ಸೆಪ್ಟಂಬರ್ ತಿಂಗಳಲ್ಲಿ ಮುದ್ರಣಗೊಳ್ಳಲಿರುವ ವಿಶೇಷ ಸಂಚಿಕೆಗೆ ಹೆಚ್ಚಿನ ರೀತಿಯಲ್ಲಿ ಜಾಹಿರಾತು ಸಂಗ್ರಹಿಸಲು ಕರೆಕೊಡಲಾಗಿದೆ. ○

(5ನೇ ಪುಟದಿಂದ)

ಉತ್ಪನ್ನ	ವರ್ಷ (ಭಾರತ)	1950-51	1960-61	1970-71	1980-81
(ಲಕ್ಷಟನ್)	ವರ್ಷ(ಚೀನಾ)	1949	1957	1965	1981
ಆಹಾರ ಧಾನ್ಯಗಳು	ಭಾರತ	508	820	1084	1296
	ಚೀನಾ	1132	1957	2845	3250
ಎಣ್ಣೆ ಬೀಜಗಳು	ಭಾರತ	52	70	96	93
	ಚೀನಾ	26	42	36	102
ಹತ್ತಿ	ಭಾರತ	5.2	9.5	8.1	11.9
	ಚೀನಾ	4.4	16.4	21.0	29.7

ಬೆಲೆ ಏರಿಕೆ

ಎರಡು ದೇಶಗಳಲ್ಲಿ ಕಾರ್ಮಿಕರ ಮತ್ತು ನೌಕರರ ಜೀವನ ವೆಚ್ಚ ಸೂಚ್ಯಾಂಕ.

ವರ್ಷ	1949	1960	1965	1970	1975	1980
ಭಾರತ	100	122	167	224	390	474
ವರ್ಷ	1950	1952	1957	1965	1975	1979
ಚೀನಾ	100	15.5	126.6	139.0	139.5	147.4

ಆರೋಗ್ಯ ಮತ್ತು ಶಿಕ್ಷಣ

	1951 ಭಾರತ	1949 ಚೀನಾ	1981 ಭಾರತ	ಚೀನಾ
ಸರಾಸರಿ ವಯಸ್ಸು	32 ವರ್ಷ	35 ವರ್ಷ	51 ವರ್ಷ	68ವರ್ಷ
ಜನನ ದರ (ಪ್ರತಿ ಸಾವಿರ ಜನಸಂಖ್ಯೆಗೆ)	39.9	36.0	37.2	17.9
ಮರಣ ದರ (ಪ್ರತಿ ಸಾವಿರ ಜನಸಂಖ್ಯೆಗೆ)	27.4	20.0	15.0	6.2
ಜನಸಂಖ್ಯೆ	36.11 ಕೋಟಿ	54.17 ಕೋಟಿ	68.52 ಕೋಟಿ	99.62ಕೋಟಿ
ಸಾಕ್ಷರತೆ ದರ	16.7./.	20./.	36.2./.	66./. [1977ರಲ್ಲಿ]

ಆಹಾರ ಧಾನ್ಯಗಳ ಬಳಕೆ: ಭಾರತದಲ್ಲಿ 1900 ರ ದಶಕದಲ್ಲಿ 182 ಕೆ.ಜಿ.ಯಿದ್ದುದು 1953ರಲ್ಲಿ 185 ಕೆ.ಜಿ. ಗಿದೆಯಷ್ಟೇ. ಚೀಣಾದಲ್ಲಿ 1952ರಲ್ಲಿ 197 ಕೆ.ಜಿಯಿದ್ದುದು 213.5 ಕೆ.ಜಿಗೇರಿದೆ.

ಆಸ್ಪತ್ರೆಗಳ ಸಂಖ್ಯೆ: ಪ್ರತಿ ಲಕ್ಷ ಜನಸಂಖ್ಯೆಗೆ ಭಾರತದಲ್ಲಿ 1950-51ರಲ್ಲಿ 24 ಇದ್ದುದು 1983 ರಲ್ಲಿ 70 ಕ್ಕೇರಿತು. ಚೀಣಾದಲ್ಲಿ ಇದು 1949 ರಿಂದ 1982ರ ಅವಧಿಯಲ್ಲಿ 14 ರಿಂದ 200ಕ್ಕೇರಿತು.

ಡಾಕ್ಟರ್‌ಗಳ ಸಂಖ್ಯೆ: 1983ರಲ್ಲಿ ಭಾರತದಲ್ಲಿ 2.97 ಲಕ್ಷ, ಚೀಣಾದಲ್ಲಿ 13.53 ಲಕ್ಷ ಇತರ ವೈದ್ಯಕೀಯ ಸಿಬ್ಬಂದಿಯ ಸಂಖ್ಯೆ ಭಾರತದಲ್ಲಿ 10.47 ಲಕ್ಷ ಚೀಣಾದಲ್ಲಿ 19ಲಕ್ಷ.

ಶಾಲಾವಯಸ್ಸಿನ ಮಕ್ಕಳಲ್ಲಿ; ಭಾರತದಲ್ಲಿ ಸುಮಾರು 66./. ಶಾಲೆಗೆ ಹೋಗುತ್ತಿದ್ದ ಣಾದಲ್ಲಿ ಈ ಶೇಕಡಾ 90ಕ್ಕೂ ಮೀರಿದೆ.

ಆಗಸ್ಟ್-3 ರ ಪಿಕೆಟಿಂಗ್

[3ನೇ ಪುಟದಿಂದ]

ದಾಂಡೇಲಿ

ಆಗಸ್ಟ್ 3ರಂದು ದಾಂಡೇಲಿಯ ಕಾಗದದ ಕಾರ್ಖಾನೆ, ಪ್ಲೈವುಡ್ ಕಾರ್ಖಾನೆ ಹಾಗೂ ಫೆರೋಅಲಾಯ್ಸ್ ಕಾರ್ಖಾನೆಯ ಕಾರ್ಮಿಕರು ಸಿ.ಐ.ಟಿ.ಯು,ಎ.ಐ.ಟಿ.ಯು.ಸಿ,ಬಿ.ಎಂ.ಎಸ್. ಎಚ್.ಎಂ.ಎಸ್. ಎಚ್.ಎಂ.ಕೆ.ಪಿ. ಹಾಗೂ ರಿಕ್ಷಾಚಾಲಕರ ನೇತೃತ್ವದಲ್ಲಿ ಪ್ರಧಾನ ಅಂಚೆಕಛೇರಿ ಹಾಗೂ ದೂರವಾಣಿ ಕೇಂದ್ರಎದುರುಗಡೆ ಪಿಕೆಟಿಂಗ್ ನಡೆಸಿ ಬಂಧನಕ್ಕೊಳಗಾದರು ಎಂದು ಕಾ. ಬಿ. ಎಂ. ನಾಯಕ್ ವರದಿ ಮಾಡಿದ್ದಾರೆ.

ಮಡಕೇರಿ

ಸಿ. ಐ. ಟಿ. ಯು, ಎ. ಐ. ಟಿ. ಯು.ಸಿ. ಜಂಟಿ ಆಶ್ರಯದಲ್ಲಿ ತೋಟ ಕಾರ್ಮಿಕರು, ದಿನಗೂಲಿ ಕಾರ್ಮಿಕರು ಎರಡುಸಾವಿರದ ಐನೂರರಷ್ಟು ದೊಡ್ಡ ಸಂಖ್ಯೆಯಲ್ಲಿ ಭಾಗವಹಿಸಿದ್ದ ಬೃಹತ್ ಮೆರವಣಿಗೆಯೊಂದನ್ನು ಸಂಘಟಿಸಲಾಗಿತ್ತು. ಕೊಡಗುಜಿಲ್ಲಾ ಜನರಲ್ ವರ್ಕರ್ಸ್ ಯುನಿಯನ್ ಕಾರ್ಯದರ್ಶಿ ಕಾ. ಐ.ಆರ್ ಅಪ್ಪಣ್ಣ, ಅಧ್ಯಕ್ಷ ವೀರಾಸ್ವಾಮಿ, ಖಜಾಂಚಿ, ಎಂ.ಎ. ಇಬ್ರಾಹಿಂ ಮತ್ತು ಎ.ಆರ್.ಕೃಷ್ಣ ಕುಮಾರ್, ಎ. ಐ. ಟಿ. ಯು. ಸಿ. ಯ. ಕೆ. ಬಿ. ನಾಣಯ್ಯ ಮೆರವಣಿಗೆ ನೇತೃತ್ವ ವಹಿಸಿದ್ದರು. ಜಿಲ್ಲಾಧಿಕಾರಿಗಳಿಗೆ ಮನವಿ ಅರ್ಪಿಸಲಾಯಿತು.

ಮೈಸೂರು

3-8-87 ರಂದು ಪ್ರಧಾನ ಅಂಚೆ ಕಛೇರಿಯನ್ನು ಪಿಕೆಟಿಂಗ್ ಮಾಡಲಾಯಿತು. ಸಿ.ಐ.ಟಿ.ಯು, ಎ.ಐ.ಟಿ.ಯು.ಸಿ, ನೇತೃತ್ವದಲ್ಲಿ ನಡೆಸಲಾದ ಪಿಕೆಟಿಂಗ್ ಕಾರ್ಯಕ್ರಮದಲ್ಲಿ 23 ಮಂದಿ ಸಂಗಾತಿಗಳು ಬಂಧನ ಕ್ಕೊಳಗಾದರು.

ತುಮಕೂರು

ಕಾರ್ಮಿಕರ ಮೆರವಣಿಗೆ ಪ್ರಧಾನ ಅಂಚೆ ಕಛೇರಿಯನ್ನು ತಲುಪಿ ಪಿಕೆಟಿಂಗ್ ನಡೆಸಿತು. ಪಿಕೆಟಿಂಗ್ ನೇತೃತ್ವವಹಿಸಿದ್ದ ಕಾ॥ ಕೆ. ಆರ್. ನಾಯಕ್, ಟಿ.ಕೆ. ಗೋವಿಂದರಾಜ್‌ರವರು ಸೇರಿದಂತೆ 130 ಜನರು ಬಂಧನಕ್ಕೊಳಗಾದರು.

ಬಳ್ಳಾರಿ

ಆಗಸ್ಟ್ 3ರಂದು ಬಳ್ಳಾರಿಯ ಜಿಲ್ಲಾಧಿಕಾರಿ ಕಛೇರಿಯ ಮುಂದೆ ಸಿ.ಐ.ಟಿ.ಯು., ಬ್ಯಾಂಕ್, ಎಲ್.ಐ.ಸಿ. ಅಂಗಡಿ ಕೆಲಸಗಾರರು ಮುನಿಸಿಪಾಲಿಟಿ ದಿನ ಗೂಲಿ ಕಾರ್ಮಿಕರು ಧರಣಿ ಸತ್ಯಾಗ್ರಹ ನಡೆಸಿದರು. ಕಾ. ನಾಗಭೂಷಣ್ ಕಾ. ಗೋಪಾಲ್‌ಶೆಟ್ಟಿ ಕಾ.ಶಾರದಮ್ಮ ಮುಂತಾದವರು ಮಾತನಾಡಿದರು.

ಬಿಜಾಪುರ

ಸಿ.ಐ.ಟಿ.ಯು. ಮತ್ತು ಎ.ಐ.ಟಿ.ಯು.ಸಿ.ಗೆ ಸೇರಿದ ಕಾರ್ಮಿಕರು ಮೆರವಣಿಗೆಯಲ್ಲಿ ಹೊರಟು ಬಿಜಾಪುರದ ಮುಖ್ಯ ಅಂಚೆ ಕಛೇರಿಯೆದುರು ಮತ ಪ್ರದರ್ಶನ ನಡೆಸಿದರು. ನಂತರ ಜಿಲ್ಲಾಧಿಕಾರಿ ಕಛೇರಿಗೆ ತೆರಳಿ ಮನವಿ ಅರ್ಪಿಸಲಾಯಿತು. ಮೆರವಣಿಗೆಯ ನೇತೃತ್ವವನ್ನು ಕಾರ್ಮಿಕ ಧುರೀಣರಾದ ಕಾ. ವಿ.ಎಂ. ಸೊನ್ನದ ಮತ್ತು ಕಾ. ಎಲ್. ಬಿ. ಲಾಯದಗುಂದಿ ವಹಿಸಿದ್ದರು.

ಬಂಟ್ವಾಳದಲ್ಲಿ 600 ಮಂದಿ, ಪುತ್ತೂರಿನಲ್ಲಿ 55 ಮಂದಿ ಅಂಚೆ ಕಛೇರಿ ಪಿಕೆಟಿಂಗ್ ನಡೆಸಿ ಬಂಧನಕ್ಕೊಳಗಾದರು

ಹಾಸನದಲ್ಲಿ 500 ಜನ ತೋಟ ಕಾರ್ಮಿಕರುಮತ್ತಿತರರು ಸಕಲೇಶಪುರದಲ್ಲಿ 250, ಮೂಡಿಗೆರೆಯಲ್ಲಿ 150, ಕಳಸದಲ್ಲಿ 150ಹಾಗೂ ಇತ್ತೀಚೆಗೆ ಸಂಘಟನೆ ಆರಂಭವಾದ ಬೇಲೂರಿನಲ್ಲಿ 70ಜನ ಕಾರ್ಮಿಕರುರಾಷ್ಟ್ರೀಯ ಆಂದೋಳನ ಸಮಿತಿ ಕರೆಯ ಮೇರೆಗೆ ಪಿಕೆಟಿಂಗ್ ನಡೆಸಿ ಬಂಧನ ಕ್ಕೊಳಗಾದರು. ಎಂದು ವರದಿಯಾಗಿದೆ.

ರಾಜಸ್ತಾನ್ ಸಿಕಾರ್ ಚಳುವಳಿ ಪುನರಾರಂಭ

ಜೂನ್‌ನಲ್ಲಿ ನಡೆದ ಸಿಕಾರ್ ಚಳುವಳಿಯನ್ನು ಪುನರಾಂಭಿಸಲು ರಾಜಸ್ತಾನ ಪಕ್ಷದ ರಾಜ್ಯ ಸಮಿತಿ ನಿರ್ಧರಿಸಿದೆ. ಈ ಹಿಂದೆ ಏಪ್ರಿಲ್‌ನಲ್ಲಿ ಸಿಕಾರ್ ನಲ್ಲಿರುವ ಕಿಸಾನ್‌ಹಾಸ್ಟೆಲ್‌ಗೆ ಪೋಲೀಸರು ನುಗ್ಗಿ ಗೂಂಡಾಗಿರಿ ನಡೆಸಿದರು. ಗೋಲಿಬಾರು ನಡೆದು ಒಬ್ಬ ವಿದ್ಯಾರ್ಥಿಯೂ ಸತ್ತಿದ್ದ. ಮೇ 22 ರಂದು ಪೋಲೀಸರು ಕಿಸಾನ್ ಹಾಸ್ಟೆಲ್‌ನ್ನು ವಶಪಡಿಸಿಕೊಂಡಿದ್ದರು. ಕಿಸಾನ್ ಹಾಸ್ಟೆಲ್‌ನಲ್ಲಿ ಸಿ. ಪಿ. ಐ.(ಎಂ)ಪಕ್ಷದ ಮತ್ತು ಪಕ್ಷದ ನಾಯಕತ್ವದಲ್ಲಿರುವ ಸಾಮೂಹಿಕ ಸಂಘಟನೆಗಳ ಕಛೇರಿಗಳು ಇವೆ. ಅಂದಿನಿಂದ ಇಂದಿನವರೆಗೆ ಇದು ಪೋಲೀಸರವಶದಲ್ಲಿದೆ. ಜೂನ್‌ನಲ್ಲಿ ಸಿಕಾರ್‌ನ ಕಿಸಾನ್ ಹಾಸ್ಟೆಲನ್ನು ಹಿಂದಿರುಗಿಸಲು ಭಾರಿ ಚಳುವಳಿಯನ್ನು ಪಕ್ಷ ಇತರ ವಿರೋಧ ಪಕ್ಷಗಳ ಸಹಕಾರದಿಂದ ನಡೆಸಿತ್ತು. ಆಗ ಮುಖ್ಯಮಂತ್ರಿಯವರು ಅದನ್ನು ಶೀಘ್ರವೇ ಕಾರ್ಯಗತ ಗೊಳಿಸುವ ಆಶ್ವಾಸನೆ ನೀಡಿದ್ದರು ಈ ಆಶ್ವಾಸನೆಯನ್ನು ಮುರಿದಿರುವ ಹಿನ್ನೆಲೆಯಲ್ಲಿ ಚಳುವಳಿ ಅದೇ ಬಿರುಸಿನಿಂದ ಪುನರಾರಂಭಿಸಲು ಕಾರಣ. ○

ಕಾ. ಸೂರ್ಯವಂಶ ಸಿಂಗ್

ಬಿಹಾರದ ರೋಹತಾಸ್‌ನ ಪಕ್ಷದ ಕಾರ್ಯಕರ್ತರನ್ನು ಅಗರೆದ್ ಪೋಲೀಸ್ ಸ್ಟೇಶನ್‌ನ ಎಸ್.ಎಚ್.ಓ. ರಕುಮ್ಮಕ್ಕಿನ ಮೇಲೆ ಮೂವರುಕುಖ್ಯಾತದುರುಳರು ಕೊಲೆ ಮಾಡಿದ್ದಾರೆ. ಈ ದುರುಳರು ನಡೆಸಿದ ಹರಿಜನ ಹೆಂಗಸಿನ ಮಾನಭಂಗದ ಬಗ್ಗೆ ಹುತಾತ್ಮರ ಸೋದರ ಮಂಗಲ ಸಿಂಗ್ ಸಾಕ್ಷ್ಯನೀಡಿದ್ದೇ ಈ ದುರುಳರ ಹಾಗೂ ಇವರ ರಕ್ಷಕ ಅಧಿಕಾರಿಯ ಕೋಪಕ್ಕೆ ಕಾರಣ. ಈ ಕೊಲೆಗೆ ಮೊದಲು ಈ ಅಧಿಕಾರಿ ಹುತಾತ್ಮರನ್ನು ಮತ್ತು ಕುಟುಂಬದ ಸದಸ್ಯರ ಮೇಲೆ ಸುಳ್ಳು ಮೊಕದ್ದಮೆ ಹಾಕಲು ಪ್ರಯತ್ನಿಸಿದ್ದ. ○

‘ಟಿಬೆಟ್ ಚೀನಾದ ಅವಿಭಾಜ್ಯ ಅಂಗ’

ಚೀನಾ ದೇಶವು ಟಿಬೇಟನ್ನು ಆಕ್ರಮಿಸಿಕೊಂಡು ಅಲ್ಲಿನ ಜನಗಳ ಸ್ವಾತಂತ್ರ್ಯ ಕಸಿದುಕೊಂಡು ದಬ್ಬಾಳಿಕೆ ನಡೆಸುತ್ತಿದೆಯೆಂದು ಎಲ್ಲಾ ಬಂಡವಾಳಶಾಹಿ ದೇಶಗಳ ಸಮೂಹ ಮಾಧ್ಯಮಗಳೂ ಅಪಪ್ರಚಾರ ನಡೆಸುತ್ತಿವೆ. ಭಾರತದಲ್ಲೂ ಇಲ್ಲಿ ಆಶ್ರಯ ಪಡೆದಿರುವ ಕೆಲವು ಟಿಬೇಟ್ ನಿರಾಶ್ರಿತರನ್ನು ವರ್ಷಕ್ಕೊಮ್ಮೆ ಗುಂಪು ಸೇರಿಸಿ ಅವರಿಂದ ಚೀನಾ ವಿರೋಧಿ ಘೋಷಣೆಗಳನ್ನು ಕೂಗಿಸುವ ಆಸಕ್ತಿ ಮಂದಿ ಇದ್ದಾರೆ. ಅಮೇರಿಕಾದ ವಾಷಿಂಗ್ಟನ್ ಟೈಮ್ಸ್‌ಪತ್ರಿಕೆ ಇತ್ತೀಚೆಗೆ ಟಿಬೇಟನ ಬಗ್ಗೆ ಇಂತಹಸೇತಪ್ಪು ಮಾಹಿತಿಗಳನ್ನೊಳಗೊಂಡ ಲೇಖನವೊಂದನ್ನು ಪ್ರಕಟಿಸಿತು. ವಾಷಿಂಗ್ಟನ್‌ನಲ್ಲಿರುವ ಚೀನಿ ರಾಯಭಾರಿ ಕಿಯಾನ್‌ಯೊಂಗ್ಗಿನ್ ಈ ಲೇಖನದಲ್ಲಿರುವ ಅಸತ್ಯವನ್ನು ಬಯಲಿಗೆಳೆದು ವಾಸ್ತವ ಸಂಗತಿಯೇನೆಂಬುದನ್ನು ತಿಳಿಸುವ ಪತ್ರವೊಂದನ್ನು ವಾಷಿಂಗ್ಟನ್ ಟೈಮ್ಸ್‌ನಲ್ಲಿ ಪ್ರಕಟಿಸಿದ್ದಾರೆ.

ಚೀನಾ ದೇಶವು ಟಿಬೇಟನ್ನು ಕಬಳಿಸಿದೆಯೆಂಬ ಅಪಪ್ರಚಾರವನ್ನು ಖಂಡಿಸಿರುವ ಕಿಯಾನ್ ಕ್ರಿ.ಶ. 1271–1368ರಲ್ಲಿ ಚೀನಾವನ್ನು ಆಳುತ್ತಿದ್ದ ಯುವಾನ್ ರಾಜವಂಶದ ಕಾಲದಲ್ಲೇ ಟಿಬೇಟ್ ಅಧಿಕೃತವಾಗಿ ಚೀನಾದ ಭಾಗವಾಯಿತು. ಆಮೇಲೆ ಎಷ್ಟೋ ರಾಜವಂಶಗಳು ಟಿಬೇಟ್‌ಮತ್ತು ಚೀನಾವನ್ನು ಆಳಿದ್ದರೂ ಚೀನಾದ ಅವಿಭಾಜ್ಯ ಅಂಗವೆನ್ನುವುದನ್ನು ಅಮೇರಿಕಾ ಸಂಯುಕ್ತ ಸಂಸ್ಥಾನ ಮತ್ತು ಭಾರತವನ್ನೂ ಒಳಗೊಂಡಂತೆ ವಿಶ್ವದ ಎಲ್ಲ ರಾಷ್ಟ್ರಗಳೂ ಒಪ್ಪಿಕೊಂಡಿವೆ.

ಟಿಬೇಟ್‌ನಲ್ಲಿ ಅನೈಸರ್ಗಿಕ ಕಾರಣಗಳಿಂದಾಗಿ 1.2 ಮಿಲಿಯ ಟಿಬೇಟ್‌ನ್ನರು ಸತ್ತಿದ್ದಾರೆಂಬ ಆರೋಪವನ್ನು ನಿರಾಕರಿಸಿರುವ ಕಿಯಾನ್ 1951ರಲ್ಲಿ ಟಿಬೇಟನ ಒಟ್ಟು ಜನಸಂಖ್ಯೆ ಇದ್ದುದೇ 1.2 ಮಿಲಿಯದಷ್ಟು. ವಾಷಿಂಗ್ಟನ್ ಟೈಮ್ಸ್‌ನಲ್ಲಿ ಮಾಡಿರುವ ಆರೋಪ ಸತ್ಯವಾಗಿದ್ದರೆ ಈವರೆಗಾಗಲೀ ಟಿಬೇಟ್‌ನಲ್ಲಿ ಜನರೇ ಇರುತ್ತಿರಲಿಲ್ಲವೆಂದಿದ್ದಾರೆ. ಹಾಗೆಯೇ ಮಧ್ಯ ಟಿಬೇಟ್‌ನಲ್ಲಿ ಒಂದು ಲಕ್ಷ ಜನ ರಾಜಕೀಯ ಬಂದಿಗಳಿದ್ದಾರೆನ್ನುವ ಆರೋಪವೂ ಸುಳ್ಳು. ಚೀನಾದ ಯಾವುದೇ ಪ್ರದೇಶದಲ್ಲೂ ಟಿಬೇಟ್‌ನ್ನೂ ಒಳಗೊಂಡಂತೆ ಎಲ್ಲೂ ಒಬ್ಬನನ್ನು ರಾಜಕೀಯ ಕಾರಣಗಳಿಗಾಗಿ ಬಂಧನದಲ್ಲಿರಿಸಲಾಗಿಲ್ಲ. ಜೈಲುಗಳಲ್ಲಿ ಕ್ರಿಮಿನಲ್ ಅಪರಾಧಿಗಳು ಮಾತ್ರ ಇದ್ದಾರೆ; ಚೀನಾದಲ್ಲಿನ ಅಪರಾಧದ ಪ್ರಮಾಣ ಪ್ರತಿ ಸಾವಿರ ಜನಕ್ಕೆ 0.53 ರಷ್ಟು ಅಂದರೆ ಪ್ರಪಂಚದಲ್ಲೇ ಅತ್ಯಂತ ಕಡಿಮೆ.

ಟಿಬೇಟನ್ನು ‘ಚೀನೀ ಕರಣ’ ಗೊಳಿಸಲಾಗುತ್ತಿದೆ. ಅಂದರೆ ಟೀಬೆಟ್ ಮೂಲವಾಸಿಗಳನ್ನು ಅಲ್ಲಿಂದ ಬೇರ್ಪಡಿಸಿ ಚೀನೀ ಸಂಜಾತರನ್ನು ಅಲ್ಲಿ ತುಂಬಿಸಿಬಿಡಲಾಗುತ್ತಿದೆಯೆಂಬ ಆರೋಪವೂ ಹುರುಳಿಲ್ಲದ್ದು, ಟಿಬೇಟ್‌ನಲ್ಲಿ ‘ಹಾನ್’ ಮೂಲದ ಜನಗಳ ಸಂಖ್ಯೆ ಕೇವಲ 76,000. ಅವರಲ್ಲಿ ಹೆಚ್ಚಿನವರು ಆರ್ಥಿಕ ಅಭಿವೃದ್ಧಿ ಕಾರ್ಯಕ್ರಮಗಳ ಅನುಷ್ಠಾನಕ್ಕಾಗಿ ಅಲ್ಲಿರುವವರು. ಟಿಬೇಟಿನ ಮೂಲ ಜನರ ಜೀವನಮಟ್ಟದ ಉನ್ನತಿಗಾಗಿ ಸಾಮಾಜಿಕ ಆರ್ಥಿಕ ಕಾರ್ಯಕ್ರಮಗಳನ್ನು ಜಾರಿಗೆ ತರಲು ಅವರು ಅಲ್ಲಿಗೆ ಬಂದಿದ್ದಾರೆ.

ಭಾರತ –ಚೀನಾ ಗಡಿ ಪ್ರಶ್ನೆಗೆ ಸಂಬಂಧಿಸಿದಂತೆ ಅಲ್ಲಲ್ಲಿ ತುಸು ಉದ್ವೇಗಕಾರಿ ಪರಿಸ್ಥಿತಿಯಿದ್ದರೂ ಅಂತಹ ಪರಿಸ್ಥಿತಿಯನ್ನು ನಿರ್ಮಿಸಿದ್ದು ಚೀನಾ ಅಲ್ಲವೆಂದು ಕಿಯಾನ್ ಹೇಳಿದ್ದಾರೆ. ಭಾರತ ಚೀನಾ ಗಡಿಯುದ್ದಕ್ಕೂ ಶಾಂತಿ ಮತ್ತು ಸುಸ್ಥಿರತೆಯ ವಾತಾವರಣವಿರಬೇಕೆಂಬುದು ಚೀನಾದ ಪ್ರಾಮಾಣಿಕ ಹಂಬಲ ಮತ್ತು ಅದಕ್ಕೆ ಭಾರತನೊಂದಿಗೆ ಸ್ನೇಹಮಯ ಸಂಬಂಧ ಬೇಕಾಗಿದೆಯೆಂದೂ ಕಿಯಾನ್ ಸ್ಪಷ್ಟೀಕರಣ ನೀಡಿದ್ದಾರೆ. ಭಾರತ ಚೀನಾ ಗಡಿಪ್ರಶ್ನೆಯನ್ನು ಶಾಂತಿಯುತ ಮಾತುಕತೆಗಳ ಮೂಲಕ, ಪರಸ್ಪರರನ್ನು ಅರ್ಥಮಾಡಿಕೊಳ್ಳುವ ಮನೋಭಾವ ತೋರ್ಪಡಿಸುವ ಮೂಲಕ ಬಗೆಹರಿಸಿಕೊಳ್ಳಬೇಕೆಂಬುದು ಚೀನಾದ ನಿಲುಮೆಯೆಂದೂ ಅವರು ಹೇಳಿದ್ದಾರೆ.

ಗೋರ್ಬಚೇವ್‌ಗೆ ಒಂದು ಪತ್ರ

ಸೋವಿಯೆತ್ ಒಕ್ಕೂಟವು ವಿಶ್ವ ಶಾಂತಿ ಮತ್ತು ನಿಶ್ಶಸ್ತ್ರೀಕರಣಕ್ಕಾಗಿ ನಡೆಸುತ್ತಿರುವ ಅನವರತ ಪ್ರಯತ್ನಗಳನ್ನು ಮೆಚ್ಚಿ ಜಗತ್ತಿನ ಎಲ್ಲಾ ರಾಷ್ಟ್ರಗಳಿಂದಲೂ ಸೋವಿಯೆತ್ ಕಮ್ಯುನಿಸ್ಟ್ ಪಕ್ಷದ ಪ್ರಧಾನ ಕಾರ್ಯದರ್ಶಿ ಮಿಖಾಯಿಲ್ ಗೋರ್ಬಚೇವ್ ಅವರಿಗೆ ದಿನ ನಿತ್ಯ ಸಾವಿರಾರು ಪತ್ರಗಳು ಬರುತ್ತಿವೆ. ಐರೋಪ್ಯ ರಾಷ್ಟ್ರಗಳಲ್ಲಿರುವ ಮಧ್ಯಮ ವ್ಯಾಪ್ತಿಯ ಕ್ಷಿಪಣಿಗಳನ್ನು ಅಲ್ಲಿಂದಕೀಳುವ ಸೋವಿಯೆತ್ ಒಕ್ಕೂಟದ ಕೊಡುಗೆ ಯೂರೋಪಿನ ಎಲ್ಲೆಡೆ ಅಂತ್ಯಂತ ಬೆಂಬಲ ಮತ್ತು ಮೆಚ್ಚುಗೆ ಗಳಿಸುತ್ತಿರುವುದರ ಸಂಕೇತವೇ ಯುರೋಪಿನ ರಾಷ್ಟ್ರಗಳಿಂದ ಗೋರ್ಬಚೇವ್ ಅವರಿಗೆ ಬರುತ್ತಿರುವ ಪತ್ರಗಳ ಪ್ರವಾಹ. ನ್ಯೂಟೈಮ್ಸ್ ಪತ್ರಿಕೆಯ ಜುಲೈ 20 ರ ಸಂಚಿಕೆಯಲ್ಲಿ ಪ್ರಕಟವಾದ ಇಂತಹ ಅನೇಕ ಪತ್ರಗಳಲ್ಲಿ ಬ್ರಿಟನ್ನಿನ ಪ್ರಜೆಯೊಬ್ಬ ಬರೆದ ಪತ್ರ ಹೀಗಿದೆ.

“ನಾನೊಬ್ಬ ಇಂಗ್ಲೆಂಡಿನ ಸಾಮಾನ್ಯ ದುಡಿಮೆಗಾರ. ನನಗೆ ಶ್ರೀಮತಿ ಥ್ಯಾಚರ್ ಬಗ್ಗೆ ಏನನಿಸುತ್ತಿದೆ ಎಂಬ ಕುರಿತು ನಿಮಗೆ ಬರೆದು ತಿಳಿಸಬೇಕೆನಿಸಿದೆ. ನನ್ನ ಮನೆಯ ಪಕ್ಕದಲ್ಲಿರುವ ಫ್ಲಾಟ್ ಒಂದರಲ್ಲಿ ಕೆಲದಿನಗಳ ಹಿಂದೆ ಎಳೆವಯಸ್ಸಿನ ತಾಯಿಯೊಬ್ಬಳು ಸತ್ತು ಬಿದ್ದಿದ್ದಳು. ಅವಳು ತನ್ನ ಹಸು ಗೂಸಿನ ಶವವನ್ನು ಬಿಗಿಯಾಗಿ ಅಪ್ಪಿಕೊಂಡಿದ್ದಳು, ಅವಳ ಮನೆಯ ವಿದ್ಯುತ್ ಮತ್ತು ಅಡುಗೆ ಅನಿಲದ ಸಂಪರ್ಕವನ್ನು ಕಿತ್ತು ಹಾಕಲಾಗಿತ್ತು. ಪ್ರಜಾಸತ್ತೆಯೆಂದು ಕರೆಸಿಕೊಳ್ಳುತ್ತಿರುವ ನಮ್ಮ ದೇಶದಲ್ಲಿ ಮಿಲಿಯಾಂತರ ಜನ ಹೀಗೆ ಬಡತನದ ರೇಖೆಯಲ್ಲೇ ಜೀವಿಸಿದ್ದಾರೆ. ನಿಜವಾಗಿಯೂ ನಮ್ಮದು ಬಂಡವಾಳಶಾಹಿಯ ಸರ್ವಾಧಿಕಾರ. ಕನ್ಸರ್‌ವೇಟಿವ್‌ಗಳು ಬಡವರನ್ನು ದೋಚಿ ಶ್ರೀಮಂತರ ಹೊಟ್ಟೆ ತುಂಬಿಸುತ್ತಿದ್ದಾರೆ. ನಾವು ತೆರಿಗೆ ಮತ್ತು ವಿಮಾ ಕಂತಿನ ರೂಪದಲ್ಲಿ ಕೊಡುವ ಹಣವನ್ನ ಕನ್ಸರ್ವೇಟಿವ್ ಆಳುವ ಪಕ್ಷದ ಮಂದಿ ಅಣು ಇಂಧನಕ್ಕಾಗಿ ಇಲ್ಲವೇ ಬ್ರಿಟಿಷ್ ಏರೋಸ್ಪೇಸ್ ನಂತಹ ಕಂಪೆನಿಗಳಿಗೆ ಸುರಿಯುತ್ತಿದ್ದಾರೆ. ನಮಗೆ ಖಂಡಿತವಾಗಿ ಬೇಡವಾಗಿರುವ ಅಣು ಅಸ್ತ್ರಗಳನ್ನು ಅಲ್ಲಿ ನಿರ್ಮಿಸಲಾಗುತ್ತಿದೆ. ಆದರೆ ಈ ಜನ ಇಂತಹ ಕಂಪೆನಿಗಳಲ್ಲಿ ಶೇರುಗಳನ್ನು ಹೊಂದಿರುತ್ತಾರೆ. ಇದಕ್ಕಾಗಿಯೇ ಅವರು ನಮಗೆ ಅಣು ಶಸ್ತ್ರಾಸ್ತ್ರಗಳು ತೀರಾ ಅಗತ್ಯವೆಂದು ನಮ್ಮನ್ನು ನಂಬಿಸಲು ಪ್ರಯತ್ನಿಸುತ್ತಾರೆ. ನಮಗೆ ಬೇಕಾಗುವಷ್ಟು ಶಾಲೆಗಳಾಗಲೀ, ಆಸ್ಪತ್ರೆಗಳಾಗಲೀ ಇಲ್ಲ. ನಾವು ಕೊಟ್ಟ ಹಣವನ್ನು ಶಾಲೆ ಮತ್ತು ಆಸ್ಪತ್ರೆಗಳ ನಿರ್ಮಾಣಕ್ಕಾಗಿ ಬಳಸಿಕೊಳ್ಳಬೇಕೆಂದು. ಇಂಗ್ಲೆಂಡಿನ ಜನರ ಆಶಯ. ಅಣು ಶಸ್ತ್ರಾಸ್ತ್ರಗಳನ್ನು ಭಾರಿ ಪ್ರಮಾಣದಲ್ಲಿ ಕಡಿತಗೊಳಿಸಬೇಕೆಂಬುದೂ ಅವರ ಆಸೆ ನಿಮ್ಮ ದೇಶದ ಆಶಯವೂ ಇದೇ ಆಗಿರುತ್ತದೆಂದು ನನಗೆ ಮನದಟ್ಟಾಗಿದೆ.

–ಡೇವಿಡ್ ಹೀಲೀ
ವಾಟರ್‌ಫೋರ್ಡ್, ಬ್ರಿಟನ್,

ಆರ್ಥಿಕ ದುಃಸ್ಥಿತಿ ವಿರುದ್ಧ ಲೆಬನಾನ್‌ನಲ್ಲಿ ಮುಷ್ಕರ

ದಿನೇ ದಿನೇ ಉಲ್ಬಣಗೊಳ್ಳುತ್ತಿರುವ ಆರ್ಥಿಕ ದುಃಸ್ಥಿತಿಯ ವಿರುದ್ಧ ಹಾಗೂ ಲೆಬನಾನ್‌ನ ಪೌಂಡನ ತೀವ್ರ ಅಪಮೌಲ್ಯವನ್ನು ಪ್ರತಿಭಟಿಸಿ ಲೆಬನಾನ್‌ನ ನಾಲ್ಕು ಮಿಲಿಯ ಜನ ಜುಲೈ 22 ರಂದು ಮುಷ್ಕರ ಆಚರಿಸಿದರು. ಬೀರುತ್, ಮತಿತ್ತರ ಮುಖ್ಯ ನಗರಗಳ ಶಾಲೆ, ಕಾಲೇಜು, ವಿಶ್ವವಿದ್ಯಾನಿಲಯ, ಅಂಗಡಿಗಳು, ಬ್ಯಾಂಕು ಮತ್ತು ಎಲ್ಲಾ ಕೈಗಾರಿಕೆಗಳೂ ತಮ್ಮ ವ್ಯವಹಾರವನ್ನು ಸಂಪೂರ್ಣ ಸ್ತಬ್ದಗೊಳಿಸಿದ ಪರಿಣಾಮವಾಗಿ ಜನಜೀವನದ ಎಲ್ಲ ಚಟುವಟಿಕೆಗಳು ಸ್ಥಗಿತಗೊಂಡವು. ಒಂದಾನೊಂದು ಕಾಲದಲ್ಲಿ ಮಧ್ಯ ಪೂರ್ವ ದೇಶಗಳಲ್ಲೇ ಅತ್ಯಂತ ಹೆಚ್ಚು ದೃಢವಾಗಿದ್ದ ಲೆಬನಾನ್‌ನ ಪೌಂಡ ಇದೀಗ ಎಷ್ಟು ಅಪಮೌಲ್ಯಗೊಂಡಿದೆಯೆಂದರೆ ಅದರ ವಿನಿಮಯ ದರ ಅಮೇರಿಕನ್ ಡಾಲರ್ ಒಂದಕ್ಕೆ ನೂರ ಎಪ್ಪತ್ತೆಂಟು ಪೌಂಡ್‌ನಷ್ಟು ಕುಸಿದಿದೆ. 1975 ರಲ್ಲಿ ಲೆಬನಾನ್‌ನಲ್ಲಿ ಅಂತಯುದ್ಧ ಪ್ರಾರಂಭಗೊಂಡಾಗ ಒಂದು ಡಾಲರ್ 2.5 ಪೌಂಡ್‌ಗಳಿಗೆ ಸಮಾನವಾಗಿತ್ತು. ಇಸ್ರೇಲ್ ಲೆಬನಾನ್‌ನ ಮೇಲೆ ಧಾಳಿಮಾಡಿದ ಒಂದು ವರ್ಷದ ಮೇಲೆ ಅಂದರೆ 1983 ಈ ವಿನಿಮಯ ಮೌಲ್ಯ ನಾಲ್ಕು ಪೌಂಡಿಗಿಳಿಯಿತು. ಕಳೆದ ಏಪ್ರಿಲ್‌ನಲ್ಲಿ 120 ಪೌಂಡುಗಳ ಒಂದು ಡಾಲರ್‌ಗೆ ಸಮಾನವಾಗಿದ್ದವು. ಈ ತೀವ್ರ ಅಪಮೌಲ್ಯವನ್ನು ತಡೆಹಿಡಿಯುವಂತೆ ಮತ್ತು ದುಡಿಯುವ ಜನತೆ ಈ ಅಪಮೌಲ್ಯವನ್ನು ಸರಿತೂಗಿಸುವಷ್ಟು ವೇತನ ಹೆಚ್ಚಿಸುವಂತೆ ಆಗ್ರಹಿಸಿ ಲೆಬನಾನ್‌ನ ಕಾರ್ಮಿಕ ಸಂಘಗಳು ಮುಷ್ಕರವನ್ನು ಸಂಘಟಿಸಿವೆ. ಲೆಬನಾನ್‌ನ ಕಾರ್ಮಿಕರು ಈ ರೀತಿ ಮುಷ್ಕರ ಹೂಡಿದ್ದು ಈ ವರ್ಷ ಇದು ಮೂರನೇ ಸಲ. ●

ಚೀನೀ ಅಕ್ಯುಪಂಕ್ಚರ್‌ನ ಭಾರಿ ಜನಪ್ರಿಯತೆ

ಪರಂಪರಾಗತ ಚೀನೀ ಚಿಕಿತ್ಸಾ ವಿಧಾನವಾಗಿರುವ ಅಕ್ಯುಪಂಕ್ಚರ್ ವಿಶ್ವದ ನೂರಕ್ಕೂಹೆಚ್ಚು ರಾಷ್ಟ್ರಗಳಲ್ಲಿ ಜನಪ್ರಿಯ ಚಿಕಿತ್ಸಾವಿಧಾನವಾಗಿ ಬಳಕೆಯಾಗುತ್ತಿದೆ. ಜಪಾನಿನಲ್ಲಿ ಒಂದು ಲಕ್ಷ ಅಕ್ಯುಪಂಕ್ಚರ್ ತಜ್ಞರಿದ್ದರೆ ಅಮೇರಿಕಾದಲ್ಲಿ 14,000 ಸೋವಿಯೆತ್ ಒಕ್ಕೂಟದಲ್ಲಿ 15,000 ಮತ್ತು ಫ್ರಾನ್ಸ್‌ನಲ್ಲಿ 9000 ತಜ್ಞರಿದ್ದಾರೆಂದೂ ಶಾಂಘಾಯ್‌ನಲ್ಲಿ ಇತ್ತೀಚೆಗೆ ನಡೆದ ಪರಂಪರಾಗತ ಚೀನೀ ವೈದ್ಯಕೀಯದ ಅಂತರಾಷ್ಟ್ರೀಯ ಸಮ್ಮೇಳನದಲ್ಲಿ ವರದಿಯಾಗಿದೆ. ಮಧುಮೇಹ, ಶ್ವಾಸನಾಳದ ಅಸ್ತಮಾ, ರಕ್ತದ ಅತಿ ಒತ್ತಡ ಇತ್ಯಾದಿ ನೂರಎಪ್ಪತ್ತಕ್ಕೂ ಮಿಕ್ಕಿದ ಕಾಯಿಲೆಗಳ ಚಿಕಿತ್ಸೆಯಲ್ಲಿ ಅಕ್ಯುಪಂಕ್ಚರ್ ಪರಿಣಾಮಕಾರಿಯೆನ್ನಲಾಗಿದೆ.

ಬಿಹಾರ ಬಂದ್‌ಗೆ ವಿರೋಧ ಪಕ್ಷಗಳ ಜಂಟಿ ಕರೆ

ಬಿಹಾರದ 6 ವಿರೋಧ ಪಕ್ಷಗಳು ಸಿ. ಪಿ. ಐ. (ಎಂ), ಸಿ. ಪಿ. ಐ., ಆರ್ ಎಸ್. ಪಿ., ಫಾರ್‌ವರ್ಡ್ ಬ್ಲಾಕ್, ಲೋಕದಳ ಮತ್ತು ಜನತಾ ಬಿಂದೇಶ್ವರಿ ದುಬೆ ಸರ್ಕಾರದ ರಾಜೀನಾಮೆಗೆ ಒತ್ತಾಯಿಸಿ ಆಗಸ್ಟ್ 11ಕ್ಕೆ ಬಿಹಾರ್ ಬಂದ್ ಆಚರಿಸಲು ಕರೆ ನೀಡಿವೆ.

ಈ ಆರು ವಿರೋಧಪಕ್ಷಗಳು ಜೂನ್ 27ಕ್ಕೆ ಜಿಲ್ಲಾ ರ್‍ಯಾಲಿಗಳು, ಮತ್ತು ಜುಲೈ 15 ರಂದು ಪಾಟ್ನಾದಲ್ಲಿ ಜಂಟಿ ರ್‍ಯಾಲಿಗಳನ್ನು ನಡೆಸಿದೆ. ಅಂದು ಗವರ್ನರ್‌ಗೆ ಕೊಡಲಾದ ವಿಜ್ಞಾಪನೆಯಲ್ಲಿ ಪ್ರಸುತ್ತ ಬಿಹಾರ ಸರ್ಕಾರ ಭ್ರಷ್ಟವಾಗಿದ್ದು ಜನರ ಸಮಸ್ಯೆಗಳಿಗೆ ಪೂರ್ಣ ನಿರ್ಲಕ್ಷ್ಯ ತೋರಿಸುತ್ತಿದ್ದು, ಆಡಳಿತ ಸಂಪೂರ್ಣ ಕುಸಿದುಬಿದ್ದಿದೆ. ಇದು ಜನರ ನಂಬಿಕೆ ಕಳೆದು ಕೊಂಡಿದ್ದು ಆಡಳಿತ ಮುಂದುವರಿಸಲು ಎಲ್ಲಾ ನೈತಿಕತೆ ಕಳೆದುಕೊಂಡಿದೆ ಎಂದು ಹೇಳಲಾಗಿದೆ. ಈ ವಿಜ್ಞಾಪನೆ ಬಿಹಾರ ಸರ್ಕಾರದ ವಿರುದ್ಧ ಚಾರ್ಜ್‌ಶೀಟ್. ಅಂದಿನ ರ್‍ಯಾಲಿಯಲ್ಲಿ 45,000 ಜನರು ಭಾಗವಹಿಸಿದ್ದರು. ●

ಹುತಾತ್ಮ ಕಾ|| ಗುರುದಯಾಲ್ ಸಿಂಗ್

ಸಾಮ್ರಾಜ್ಯಶಾಹಿ–ಬೆಂಬಲಿತ ವಿಚ್ಛಿದ್ರಕಾರೀ ಭಯೋತ್ಪಾದಕರ ವಿರುದ್ಧ ಪಕ್ಷದ ಹೋರಾಟದಲ್ಲಿ ಇನ್ನೊಬ್ಬ ಸಂಗಾತಿ ಹುತಾತ್ಮರಾಗಿದ್ದಾರೆ. ಕಾ|| ಗುರುದಯಾಲ್ ಸಿಂಗ್ ಫಿಲ್ಲೋರ್ ತೆಹಸಿಲ್ ಸಮಿತಿಯ ಸದಸ್ಯರಾಗಿದ್ದರು. ಅಲ್ಲದೆ ಜಲಂದರ್ ಕಿಸಾನ್ ಸಭಾದ ಜಂಟಿ ಕಾರ್ಯದರ್ಶಿಗಳಾಗಿದ್ದರು. ಜುಲೈ 21ರಂದು ರಾತ್ರಿ 7 ಗಂಟೆಗೆ ಸ್ಕೂಟರ್ ಸವಾರರಿಬ್ಬರು ಅವರ ಮನೆಗೆ ನುಗ್ಗಿ ಗುಂಡಿಕ್ಕಿ ಅವರನ್ನು ಕೊಂದರು. ○

ಮಧ್ಯಂತರ ಚುನಾವಣೆಗೆ ಒತ್ತಾಯ – ಕಲ್ಕತ್ತದಲ್ಲಿ ರ್‍ಯಾಲಿ

ಜುಲೈ 24 ರಂದು ಪಕ್ಷದ ಕಲ್ಕತ್ತ ಜಿಲ್ಲಾ ಸಮಿತಿ ಏರ್ಪಡಿಸಿದ ಭಾರಿ ರ್‍ಯಾಲಿಯಲ್ಲಿ ರಾಜೀವ್‌ಗಾಂಧಿ ರಾಜೀನಾಮೆ ನೀಡಿ, ಮಧ್ಯಂತರ ಚುನಾವಣೆ ನಡೆಸಬೇಕೆಂದು ಒತ್ತಾಯ ಮಾಡಿತು.

ಕೇಂದ್ರ ಸಮಿತಿಯ ಸದಸ್ಯ ಕಾಂ· ಸುನಿಲ್ ಮೈತ್ರ ಮತ್ತು ಜಿಲ್ಲಾ ಕಾರ್ಯದರ್ಶಿ ಲಕ್ಷ್ಮಿಸೇನ್ ರ್‍ಯಾಲಿಯನ್ನುದ್ದೇಶಿಸಿ ಮಾತನಾಡಿದರು. ರಾಜೀವ್‌ಗಾಂಧಿ ಸರ್ಕಾರ ಕೇವಲ ಎರಡುವರೆ ವರ್ಷದಲ್ಲೇ ಜನರ ವಿಶ್ವಾಸ ಕಳೆದುಕೊಂಡಿದೆ. ಬಿಕ್ಕಟ್ಟು ಸಾರ್ವತ್ರಿಕವಾಗಿದೆ. ಪ್ರತ್ಯೇಕತಾವಾದ ಮತ್ತು ಕೋಮುವಾದಿ ಹಿಂಸಾಚಾರ ತಾಂಡವವಾಡುತ್ತಿದೆ. ಭ್ರಷ್ಟಾಚಾರ ಎಲ್ಲಾ ಮಿತಿ ಮೀರಿದೆ. ಇಂತಹ ಪರಿಸ್ಥಿತಿಯಲ್ಲಿ ಎಲ್ಲಾ ಪ್ರಜಾಸತ್ತಾತ್ಮಕ ಅಭಿಪ್ರಾಯವುಳ್ಳ ಜನರು ಸರ್ಕಾರದ ರಾಜೀನಾಮೆಗೆ ಒತ್ತಾಯ ಪಡಿಸಲು ಚಳುವಳಿಗೆ ಸೇರಬೇಕೆಂದು ಭಾಷಣಕಾರರು ಅಭಿಪ್ರಾಯ ಪಟ್ಟರು.

ಮರುದಿನ ಅಂದರೆ ಜುಲೈ 25 ರಂದು ಎಸ್.ಎಫ್.ಐ. ಮತ್ತು ಡಿ.ವೈ.ಎಫ್.ಐ. ಜಂಟಿಯಾಗಿ ಕಲ್ಕತ್ತಾ ವಿಶ್ವವಿದ್ಯಾಲಯದಲ್ಲಿ ನಡೆಸಿದ ರ್‍ಯಾಲಿಯಲ್ಲಿ ಇದೇ ಒತ್ತಾಯವನ್ನು ಪುನರುಚ್ಚರಿಸಲಾಯಿತು. ಕಲ್ಕತ್ತಾ ವಿಶ್ವವಿದ್ಯಾಲಯದಿಂದ ನಗರದ ಇನ್ನೊಂದು ಕೊನೆಯಲ್ಲಿರುವ ಜಾಧವಪುರ ವಿಶ್ವವಿದ್ಯಾಲಯಕ್ಕೆ ಸಾವಿರಾರು ವಿದ್ಯಾರ್ಥಿಗಳು, ಯುವಕರು ಮೆರವಣಿಗೆಯಲ್ಲಿ ಹೋದರು ಮೆರವಣಿಗೆ ಎರಡೂವರೆ ಗಂಟೆಗಳಷ್ಟು ಕಾಲ ನಡೆಯಿತು.

REG No. BGW-148 MAG (2) PRB DECR 319/-78-79

ವಕೀಲರ ಸಂಘದ ಬಳ್ಳಾರಿ ಘಟಕ

ಅಖಿಲ ಭಾರತ ವಕೀಲರ ಸಂಘದ ಬಳ್ಳಾರಿ ಜಿಲ್ಲೆಯ ಸದಸ್ಯರ ಸಭೆ ಜುಲೈ 26 ರಂದು ಹಂಪೆಯಲ್ಲಿ ಜರುಗಿತು. ಜಿಲ್ಲೆಯ ವಿವಿಧ ಭಾಗಗಳಿಂದ ಮಹಿಳೆಯರನ್ನು ಒಳಗೊಂಡು ಆಗಮಿಸಿದ 33 ಮಂದಿ ಪ್ರತಿನಿಧಿಗಳನ್ನು ಪ್ರಾರಂಭದಲ್ಲಿ ಡಿ. ದಯಾನಂದರವರು ಸ್ವಾಗತಿಸಿದರು. ಎ. ಐ. ಎಲ್. ಯು. ಕೇಂದ್ರ ಸಮಿತಿಯ ಸದಸ್ಯರಾದ ಕಾ|| ನಾಗಮೋಹನದಾಸ್‌ರವರು ಸಂಘದ ಕಾರ್ಯಕ್ರಮವನ್ನು ವಿವರಿಸಿ ಸ್ವಾತಂತ್ರ್ಯ ಚಳುವಳಿಯಲ್ಲಿ ವಕೀಲರು ವಹಿಸಿದ ಪಾತ್ರ ಜನಸಾಮಾನ್ಯರ ಹೋರಾಟಗಳಿಗೆ ಬೆಂಬಲ ನೀಡಬೇಕಾದ ಪ್ರಾಮುಖ್ಯತೆಯನ್ನು ತಿಳಿಸಿದರು. ಎ. ಐ. ಎಲ್. ಯು. ಬಾರ್ ಅಸೋಸಿಯೇಶನ್ ಪ್ಯಾರಲ್ಲಲ್ ಅಲ್ಲವೆಂದು ಹಾಗೂ ಯಾವುದೇ ರಾಜಕೀಯ ಪಕ್ಷದ ಕೈಗೊಂಬೆಯಲ್ಲ ಆದರೂ ವಕೀಲರಾದ ನಮಗೂ ರಾಜಕೀಯ ಅಗತ್ಯವಾಗಿ ಬೇಕು. ಹಣಕೋಸ್ಕರವೇ ಕಪ್ಪು ಕೋಟು ಧರಿಸುವುದಲ್ಲ ನ್ಯಾಯಕ್ಕಾಗಿ ಎಂದು ವಿವರಿಸಿದರು. ಕಿರಿಯ ವಕೀಲರಿಗೆ ಕೊಡುತ್ತಿರುವ ಸ್ಟೈಪಂಡ್ ಸಂಖ್ಯೆ ಹೆಚ್ಚಿಸಬೇಕು. ಜನಸಾಮಾನ್ಯರಿಂದ ಪಡೆಯುತ್ತಿರುವ ಕೋರ್ಟ್ ಫೀ ಕಡಿಮೆಯಾಗಬೇಕೆಂಬ ಹಲವಾರು ನಿರ್ಣಯಗಳನ್ನು ಸಭೆ ಅಂಗೀಕರಿಸಿತು. ನಂತರ ಸಭೆಯಲ್ಲಿ ಬಳ್ಳಾರಿ ಜಿಲ್ಲಾ ಸಂಘಟನಾ ಸಮಿತಿಯನ್ನು ರಚಿಸಲಾಯಿತು. ಸಂಚಾಲಕರಾಗಿ ಎಚ್. ದಯಾನಂದ ಸಹಸಂಚಾಲಕರುಗಳಾಗಿ ಮಹೇಂದ್ರನಾಥ, ಶಂಕರನಾಯ್ಡು ಹಾಗೂ ಕುಮಾರಿ ಕಲ್ಪನಾರವರನ್ನ ಸರ್ವಾನುಮತದಿಂದ ಆಯ್ಕೆ ಮಾಡಲಾಯಿತು. ಕೊನೆಗೆ ಮಹೇಂದ್ರನಾಥರವರು ವಂದನಾರ್ಪಣೆಯೊಂದಿಗೆ ಸಭೆ ಮುಕ್ತಾಯಗೊಂಡಿತು. ●

ಸ್ವತಂತ್ರ ಭಾರತದ ನಲ್ವತ್ತು ವರ್ಷಗಳು

(1ನೇ ಪುಟದಿಂದ)

ಶಕ್ತಿಗಳ ಮಿಲಿಟರಿ ಕೂಟಗಳತ್ತ ಸೆಳೆಯಲ್ಪಟ್ಟಿವೆ. ಮಿಲಿಟರಿ ಅಥವಾ ತುಂಡರಿಸಿದ ಸಂಸದೀಯಆಳ್ವಿಕೆಗೊಳಗಾಗಿವೆ.

ಆತಂಕಕಾರೀ ಅಂಶಗಳು

ಹೇಗಿದ್ದರೂ, ದೇಶ ಅಪಾಯಕಾರೀ ಸ್ಥಿತಿಗೆ ಬಂದು ಮುಟ್ಟಿದೆ. ಇದಕ್ಕೆ ಕಾರಣವಾದ ಸಂಗತಿಗಳೇನು?

ಮೊದಲನೆಯದಾಗಿ: ಜನ ಸಾಮಾನ್ಯರ ಮೇಲಿನ ಭಾರೀಹೊರೆ. ಭಾರತದ ರೈತ ಮತ್ತು ಕೃಷಿಕೂಲಿಗಾರನ ಸ್ಥಿತಿ ಒಂದು ಸ್ವತಂತ್ರ ದೇಶದ ಸ್ವತಂತ್ರರೈತನಂತಿಲ್ಲ. ಬದಲಾಗಿ, ಸುಮಾರಾಗಿ ಜೀತದಾಳಿನಂತಿದೆ. ಕಾರ್ಮಿಕವರ್ಗ ಮುಚ್ಚಿದ ಕಾರ್ಖಾನೆಗಳನ್ನು, ಲಾಕೌಟುಗಳನ್ನು ರಿಟ್ರೆಂಚ್‌ಮೆಂಟ್‌ಗಳನ್ನು ಎದುರಿಸಬೇಕಾಗಿದೆ. ಭೂತಾಕಾರದ ನಿರುದ್ಯೋಗ ಏರುವಬೆಲೆಗಳು ಜೀವನ ಮಟ್ಟವನ್ನು ನಿರಂತರವಾಗಿ ಕೆಳಕ್ಕೆ ದಬ್ಬುತ್ತಿವೆ. ವಿಶ್ವಬ್ಯಾಂಕ್ ನಮ್ಮ ಆರ್ಥಿಕದೊಳಗೆ ಹೆಚ್ಚುಹೆಚ್ಚಾಗಿ ಮೂಗು ತೂರಿಸುತ್ತಿದೆ.

ಎರಡನೆಯ ನಕಾರಾತ್ಮಕ ಅಂಶವೆಂದರೆ ಪ್ರಜಾಪ್ರಭುತ್ವದ ಮೇಲೆ ಹೆಚ್ಚುತ್ತಿರುವ ಹಲ್ಲೆಗಳು ಸಂಸದೀಯ ಹೊರ ರಚನೆ ಉಳಿದಿದ್ದರೂ, ಸಂಸದೀಯನೀತಿಗಳನ್ನು ಒಂದೊಂದಾಗಿ ಗಾಳಿಗೆ ತೂರಲಾಗುತ್ತಿದೆ ಕುತರ್ಪರಿಸ್ಥಿತಿಯ ಹೇರಿಕೆ ಬಂಡವಾಳಶಾಹೀ ಮಾರ್ಗದಲ್ಲಿ ಸಂವಿಧಾನ ಸದಾ ಹೇಗೆ ಹಲ್ಲೆಗೊಳಗಾಗುತ್ತಿರುತ್ತದೆ ಎಂಬುದನ್ನು ತೋರಿಸಿಕೊಟ್ಟಿದೆ.

ಮೂರನೆಯ: ಅಪಾಯಕಾರೀ ಸಂಗತಿ ರಾಷ್ಟ್ರೀಯ ಐಕ್ಯತೆ ಕಾಂಗ್ರೆಸ್ ಆಳ್ವಿಕೆಯಲ್ಲಿ ತ್ವರಿತವಾಗಿ ದುರ್ಬಲಗೊಳ್ಳುತ್ತಿರುವ ಪ್ರತ್ಯೇಕತಾವಾದಿ, ಸಂಕುಚಿತವಾದಿ, ಕೋಮುವಾದೀ ಶಕ್ತಿಗಳ ವಿರುದ್ಧ ಜನತೆಯ ದೇಶಪ್ರೇಮವನ್ನು ಜಾಗೃತಗೊಳಿಸುವಲ್ಲಿ ಈದುಷ್ಟಶಕ್ತಿಗಳ ವಿರುದ್ಧರಾಜಕೀಯವಾಗಿ ಹೋರಾಡುವಲ್ಲಿ ಎಲ್ಲಾ ಕಾಂಗ್ರೆಸ್ ಸರ್ಕಾರಗಳು ವಿಫಲಗೊಂಡಿವೆ. ದೇಶದ ಐಕ್ಯತೆ ವಿರುದ್ಧ ಸಾಮ್ರಾಜ್ಯಶಾಹೀ ಪಿತೂರಿಗಳನ್ನು ಗುರುತಿಸಲಾರದಾಗಿದ್ದಾರೆ. ಇಂದಿರಾಗಾಂಧಿಯವರ ಹತ್ಯೆಯಹಿಂದೆ ಸಾಮ್ರಾಜ್ಯಶಾಹೀ ಕೈಗಳನ್ನ ಗುರುತಿಸುವಲ್ಲಿ ಅಸಮರ್ಥವಾದ ರೀತಿಯಲ್ಲಿ.

ವರ್ಗ ಆಳ್ವಿಕೆಯ ಫಲ

ಈ ಎಲ್ಲಾ ನಕಾರಾತ್ಮಕ ಅಂಶಗಳನ್ನು ಪರಿಶೀಲಿಸುವಾಗ ಆಳುವ ಪಕ್ಷದ ಮೇಲಷ್ಟೇ ಗಮನ ಸೀಮಿತಗೊಳಿ ದೇಶವನ್ನು ಆಳುತ್ತಿರುವ ವರ್ಗಗಳು ಯಾವುವು ಎಂಬುದನ್ನು ಮರೆತು ಬಿಡುವುದು ತೀರಾಬೋಗೆಳೆತನ. ಒಂದು ರಾಜಕೀಯ ಪಕ್ಷ ಒಂದಿಲ್ಲೊಂದು ವರ್ಗದ ಸಾಧನ. ವಿಷ್ಣುವಿನ ಹತ್ತವತಾರಗಳಂತೆ ಅದಕ್ಕೆ ಹಲವುಅವತಾರಗಳಿರಬಹುದಷ್ಟೇ ರಾಷ್ಟ್ರೀಯ ಆಂದೋಲನದ ನೇತೃತ್ವವಹಿಸಿದ್ದ ಕಾಂಗ್ರೆಸ್ ಮುಖಂಡರ ಆಧುನಿಕ ಬಂಡವಾಳಶಾಹಿ ದೃಷ್ಟಿಕೋನದಿಂದ ಸ್ವತಂತ್ರಭಾರತ ತನ್ನ ಸಮಸ್ಯೆಗಳನ್ನು ಪರಿಹರಿಸಿಕೊಳ್ಳಲು ಸಾಧ್ಯವಿಲ್ಲ ಎಂದು ಸ್ವಾತಂತ್ರ್ಯ ಹೋರಾಟದ ಸಮಯದಲ್ಲೇ ಕಮ್ಯುನಿಸ್ಟ ಪಕ್ಷ ಎಚ್ಚರಿಸಿತ್ತು. ಈ ದೃಷ್ಟಿಕೋನ ದೇಶದ ಐಕ್ಯತೆಯನ್ನ ಕೂಡಾ ಬುಡಮೇಲು ಮಾಡುತ್ತದೆ. ಎಂಬುದು ಈಗ ಸ್ಪಷ್ಟವಾಗುತ್ತಿದೆ. ಬಂಡವಾಳಶಾಹಿ ಜಾಗತಿಕ ಮಟ್ಟದಲ್ಲಿ ತನ್ನ ಪ್ರಗತಿಶೀಲತೆಯನ್ನು ಕಳೆದುಕೊಂಡಿರುವ ಸಮಯದಲ್ಲಿ ಕಾಂಗ್ರೆಸ್ ಪಕ್ಷದ ಮೂಲಕ ಭಾರತದ ಬಂಡವಾಳಶಾಹೀ ವರ್ಗ ಪ್ರತಿಗಾಮಿ ಭೂ ಹಿತಾಸಕ್ತಿಗಳೊಂದಿಗೆ ಸಖ್ಯ ಬೆಳೆಸಿ ಪ್ರಜಾಪ್ರಭುತ್ವವನ್ನು ಹತೋಟಿಯಲ್ಲಿಟ್ಟು ಕೊಂಡಿದ್ದರ ಫಲವಿದು.

ಈ ಎಲ್ಲಾ ರಾಷ್ಟ್ರ ವಿರೋಧಿ ಶಕ್ತಿಗಳ ಕಪಿ ಮುಷ್ಟಿಯನ್ನು ಮುರಿಯಬೇಕಾದರೆ ಭಾರತದ ರಾಜಕೀಯದ ಮೇಲೆ, ಆಡಳಿತ ಮತ್ತು ಪ್ರಜಾಪ್ರಭುತ್ವದ ಮೇಲೆ ಈ ವರ್ಗದ ಮತ್ತು ಅದನ್ನು ಪ್ರತಿನಿಧಿಸುವ ಪಕ್ಷಗಳ ಹಿಡಿತವನ್ನು ಮುರಿಯಲು ದೇಶ ಸಿದ್ಧರಾಗಬೇಕು. ವಿರೋಧಿ ಬೂರ್ಜ್ವಾ ಪಕ್ಷಗಳ ರಾಜಕೀಯ ಗುಡುಗುಗಳೇನೇ ಇದ್ದರೂ ಒಂದುಪರ್ಯಾಯ ಮಾರ್ಗ ಅಥವಾ ಕಣ್ಣೋಟ ಅವಕ್ಕಿಲ್ಲ. ಅವು ಕಾಂಗ್ರೆಸ್ (ಐ)ನ ವರ್ಗ ಕುಟುಂಬಕ್ಕೆ ಸೇರಿದ ಪಕ್ಷಗಳೆಂಬುದು ಜನತಾ ಆಳ್ವಿಕೆಯಲ್ಲಿ ಚೆನ್ನಾಗಿ ಕಂಡು ಬಂತು.

ಆದ್ದರಿಂದ ಸ್ವಾತಂತ್ರ್ಯ, ಪ್ರಜಾಪ್ರಭುತ್ವ, ಐಕ್ಯತೆ ಮತ್ತು ಜನಸಾಮಾನ್ಯರ ಹಿತಾಸಕ್ತಿಗಳನ್ನು ರಕ್ಷಿಸುತ್ತೇವೆಂಬ ಸವಾಲು ಎಲ್ಲಾ ಜಾತಿ, ಭಾಷೆ, ಕೋಮುಗಳ ಕಾರ್ಮಿಕರು, ಕೃಷಿ ಕೂಲಿಕಾರರು, ಮತ್ತು ಮಧ್ಯಮ ವರ್ಗಗಳು ಮುಂತಾದ ಮೂಲಭೂತ ಜನ ಸಮೂಹಗಳ ಮೇಲೆ ಆಧಾರಿತವಾದ ಎಡ ಮತ್ತು ಪ್ರಜಾಪ್ರಭುತ್ವ ಶಕ್ತಿಗಳಿಂದ ಬರಬೇಕು ಮತ್ತು ಬರುತ್ತಿದೆ. ಈ ಜನ ಸಮೂಹಗಳ ಸರ್ವಸಾಮಾನ್ಯ ಹೋರಾಟಗಳಿಂದ ಮಾತ್ರವೇ ಹಲವಾರು ರಾಜ್ಯಗಳ ಸಮಾನ ಆರ್ಥಿಕ ಬೆಳವಣಿಗೆಯ ಒತ್ತಾಯಗಳನ್ನು ಬಂಡವಾಳಶಾಹೀ ಮಾರ್ಗದ ವಿರುದ್ಧ ಒಂದು ಸರ್ವ ಸಾಮಾನ್ಯ ಹೋರಾಟದಲ್ಲಿ ಬೆಸೆದು ವಿಚ್ಛಿದ್ರಕಾರೀ ದೃಷ್ಟಿಕೋನವನ್ನು ಎ ನಿಲ್ಲಲು ಸಾಧ್ಯ.

ಸಿ.ಪಿ.ಐ. [ಎಂ] ಮತ್ತು ಇತರ ಎಡ ಪಕ್ಷಗಳು ಪಶ್ಚಿಮ ಬಂಗಾಳ ಮತ್ತು ಕೇರಳದಲ್ಲಿ ಸಾಧಿಸಿದ ಗೆಲುವು ಕೇವಲ ಆಕಸ್ಮಿಕಗಳಲ್ಲ. ಕೋಮು ಶಕ್ತಿಗಳು ಹಾಗೂ ಕಾಂಗ್ರೆಸ್ (ಐ)ನ ಜನ ವಿರೋಧಿ ಧೋರಣೆಗಳ ವಿರುದ್ಧ ನೇರ ಸೆಣಸಾಟದಿಂದ ಗಳಿಸಿದ ವಿಜಯಗಳವು. ಸನ್ನಿವೇಶಕ್ಕೆ ಅಗತ್ಯವಾದ ವೇಗದಲ್ಲಿ ಎಡ ಮತ್ತು ಪ್ರಜಾಪ್ರಭುತ್ವ ಶಕ್ತಿಗಳು ಬೆಳೆಯುತ್ತಿಲ್ಲ ನಿಜ. ಆದರೆ ಜನ ಈ ಶಕ್ತಿಗಳ ನೇತೃತ್ವದಲ್ಲಿ ರಣರಂಗಕ್ಕೆ ಇಳಿದಿದ್ದಾರೆ. ಪಂಜಾಬ್ ಅಸ್ಸಾಂ, ತ್ರಿಪುರ, ದಾರ್ಜಿಲಿಂಗ್‌ಗಳಲ್ಲಿ ದೇಶದ ಐಕ್ಯತೆಯ ರಕ್ಷಣೆಗಾಗಿ ರಕ್ತ ಸುರಿಸುತ್ತಿದ್ದಾರೆ. ಬೆಳೆಯುತ್ತಿರುವ ಅವರ ಹೋರಾಟಗಳು ಮಾತ್ರವೇ ಜನತೆಯ ಪರವಾದ, ದೇಶದ ಐಕ್ಯತೆಯ ಪರವಾದ ಒಂದು ಹೊಸ ತೀವ್ರಗಾಮೀ ಪರ್ಯಾಯದ ಆಸೆಯನ್ನು, ಭರವಸೆಯನ್ನು ಹುಟ್ಟಿಸುತ್ತವೆ.

ಈ ನಡುವೆ, ಕಾಂಗ್ರೆಸ್(ಐ) ವಿರುದ್ಧ ಹೋರಾಟವನ್ನು ಎಷ್ಟು ಸಾಧ್ಯವೋ ಅಷ್ಟು ಜಾತ್ಯಾತೀತ ಪಕ್ಷಗಳ ಸಹಕಾರದೊಂದಿಗೆ ಮುಂದುವರಿಸಬೇಕು. ಆದರೆ ಈ ಹೋರಾಟದ ದಿಕ್ಕು ಮೂಲಭೂತ ಹೋರಾಟಕ್ಕೆ ನೆರವಾಗುವಂತಿರಬೇಕು. ಕೇವಲ ಪತ್ರಿಕೆಗಳಲ್ಲಿಸಂಸತ್ತಿನಲ್ಲಿ ದೋಷಣೆ, ಶಾಪ ಅಥವಾ ಹಗರಣಗಳನ್ನು ಬಯಲುಗೆಳೆಯುವ ಮೂಲಕ ಸಂಸತ್ತಿನಲ್ಲಿ ಅಗಾಧ ಬಹುಮತ ಬೆನ್ನಿಗಿರುವ ಕಳಂಕಿತ ರಾಜೀವ ಸರ್ಕಾರವನ್ನು ಕೆಳಗಿಳಿಸುವುದು ಸಾಧ್ಯವಿಲ್ಲ. ಇದಕ್ಕೆ ಸಾಮೂಹಿಕ ಒತ್ತಡ ಮತ್ತು ಒತ್ತಾಯಗಳು ಬೇಕು. ●

ರಾಜೀವ್‌ಗಾಂಧಿಯವರ ರಾಜೀನಾಮೆಗೆ ಒತ್ತಾಯ

(1ನೇ ಪುಟದಿಂದ)

ನಿಸಿದೆ. ಭೀಕರ ಬರಗಾಲ ಪರಿಸ್ಥಿತಿ ಭಾರತ-ಶ್ರೀಲಂಕಾ ಒಪ್ಪಂದ, ಕಾಲೇಜ್ ಅಧ್ಯಾಪಕರ ಹೋರಾಟ, ಬಂಗ್ಲಾದಿಂದ ತ್ರಿಪುರಾಕ್ಕೆ ಬರುತ್ತಿರುವ 'ಚಕ್ಮಾ' ನಿರಾಶ್ರಿತರ ಬಗ್ಗೆ ಕೇಂದ್ರ ಸಮಿತಿ ಚರ್ಚಿಸಿ ನಿರ್ಣಯಗಳನ್ನು ಅಂಗೀಕರಿಸಿತು.

ಅಖಿಲ ಭಾರತ ಕಿಸಾನ್ ಸಭಾ, ಕೃಷಿ ಕೂಲಿಕಾರರ ಸಂಘಟನೆಗಳು ನಡೆಸುತ್ತಿರುವ ಸೆಪ್ಟೆಂಬರ್ 7-13ರವರೆಗಿನ ಹೋರಾಟಕ್ಕೆ, ಸೆ. 23ರಂದು ಡಿ.ವೈ.ಎಫ್.ಐ. ಸಂಘಟನೆಗಳು ಏರ್ಪಡಿಸಿರುವ ದೆಹಲಿ ಚಲೋ ಕಾರ್ಯಕ್ರಮಕ್ಕೆ ಕೇಂದ್ರ ಸಮಿತಿ ಬೆಂಬಲಿಸಿದೆ.

ಪಾಲಿಟ್ ಬ್ಯೂರೋ ಸಮಿತಿಯು ಮುಂದಿಟ್ಟ ರಾಜಕೀಯ ವರದಿ ಹಾಗೂ ಕೆಲಸದ ವರದಿಯನ್ನು ಕೇಂದ್ರ ಸಮಿತಿ ಚರ್ಚಿಸಿ ಅಂಗೀಕರಿಸಿತು. ಜನರ ಮಧ್ಯೆ ಬೆಳೆಯುತ್ತಿರುವ ಅಸಂತೃಪ್ತಿ ಲೋಕ ಸಭೆಯಲ್ಲಿ ರಾಜೀವ್‌ಗಾಂಧಿಯವರಿಗಿರುವ ಅಗಾಧ ಬಹುಮತದಿಂದ ಫಲವಿಲ್ಲ ಎನ್ನುವಂತಾಗಿಸಿದೆ.

ಕಳೆದ ಎರಡು ವರ್ಷಗಳಲ್ಲಿ ಮಾಡಿದ ಅಪರಾಧಗಳಿಗಿಂತ ಹೆಚ್ಚುಅಕ್ಷಮ್ಯ ಕೃತ್ಯಗಳನ್ನು ನಾಲ್ಕು ತಿಂಗಳುಗಳಲ್ಲಿ ರಾಜೀವ್ ಸರ್ಕಾರ ಮಾಡಿದೆ. ಪಂಜಾಬಿನಲ್ಲಿ ತೀವ್ರಗಾಮಿಗಳ ವಿರುದ್ಧ ಹೋರಾಡುವ ನಿಲುವು ತೆಗೆದುಕೊಂಡ ಬರ್ನಾಲಾ ಸರ್ಕಾರದ ವಜಾ ದೇಶದ ಐಕ್ಯತೆಗಾಗಿ ನಡೆಯುತ್ತಿದ್ದ ಹೋರಾಟದ ಬೆನ್ನಿನಲ್ಲಿ ಚೂರಿ ಹಾಕಿ ಇರಿದಂತಾಗಿದೆ ಎಂದು ವರ್ಣಿಸಿದೆ.

ಜಾತ್ಯಾತೀತವಾದ, ಜಾತೀಯ ಶಕ್ತಿಗಳಿಗೆದುರಾಗಿ ಹೋರಾಟ ಮಾಡಲು ಕಂಕಣ ತೊಟ್ಟು ಸರ್ವಾಧಿಕಾರದ ವಿರುದ್ಧ ಹೋರಾಟ ಮಾಡುವ ಪ್ರಜಾಸತ್ತೆಯನ್ನು ಕಾಪಾಡುವ ಎಲ್ಲಾ ಭ್ರಷ್ಟಾಚಾರವನ್ನು ತೊಡೆದು ಹಾಕುವ ಸರಿಯಾದ ಕೇಂದ್ರ-ರಾಜ್ಯ ಸಂಬಂಧಗಳನ್ನು ಒಪ್ಪುವ, ಅಲಿಪ್ತ ವಿದೇಶಾಂಗ ನೀತಿ, ವಿಶ್ವಶಾಂತಿಯನ್ನು ಸಂರಕ್ಷಿಸುವ ವಿಚ್ಛಿದ್ರಕಾರಗಳು ಹಾಗೂಸಾಮ್ರಾಜ್ಯಶಾಹಿಗಳ ಕೈವಾಡಗಳಿಗೆದುರಾಗಿ ದೇಶದ ಐಕ್ಯತೆಯ ಸಂರಕ್ಷಣೆ ಮಾಡುವ ರೈತರಿಗೆ ನ್ಯಾಯ ಬೆಲೆ ನೀಡುವ, ಬೆಲೆ ಏರಿಕೆಯನ್ನು ತಡೆಗಟ್ಟುವ ಮತ್ತು ನಿರುದ್ಯೋಗಭತ್ಯೆ ನೀಡುವ ಸರಕಾರವನ್ನು ಜನರು ಆರಿಸಬೇಕೆಂದು ಸಿ.ಸಿ. ಕರೆ ನೀಡಿದೆ.

ಅನುವಾದ: ಇ. ಕೆ. ಎನ್. ರಾಜನ್.

ಈ ವಾರ....

★ ಬೋಫೋರ್ಸ್ ವಿಚಾರದಲ್ಲಿ ಸರಕಾರ ಇಚ್ಛಿಸಿದರೂ ಇನ್ನೂ ಉಳಿದಿರಬಹುದಾದ ರಹಸ್ಯಗಳು ಹಾಗೆಯೇ ಬಹು ಕಾಲ ಗೋಪ್ಯದಲ್ಲಿ ಉಳಿಯುವುದು ಅಸಾಧ್ಯ. ಆಗಲಾದರೂ ನಿಜಸ್ಥಿತಿ ಬಯಲಿಗೆ ಬಂದೇ ಬರುತ್ತದೆ. ಇದರ ಬದಲು ತಾನು ಮುಚಿಡಬೇಕಾದುದು ಏನೂ ಇಲ್ಲವೆಂದು ಹತ್ತು ಹಲವಾರು ಭಾರಿ ಸಾರಿರುವ ಸರ್ಕಾರ ಮುಕ್ತ ವಿಚಾರಣೆಗೇಕೆ ಅನವಶ್ಯಕ ತಾಂತ್ರಿಕ ಅಡಚಣೆಗಳನ್ನು ಒಡ್ಡುತ್ತ ಹೋಗಬೇಕು?
ಪ್ರಧಾನಿಯ ಕುಟುಂಬ ಮಾತ್ರ ಭ್ರಷ್ಟಾಚಾರ ಕಳಂಕದಿಂದ ದೂರವಾಗಿರಬಹುದು. ಆದರೆ ಅವರ ಸರಕಾರ ಬೇರಾರನ್ನಾದರೂ ರಕ್ಷಿಸಲು ಇಷ್ಟೆಲ್ಲ ಶ್ರಮ ವಹಿಸುತ್ತಿದೆಯೆಂಬ ಅನುಮಾನಗಳಿಂದಲೂ ಅದನ್ನು ಮುಕ್ತಗೊಳಿಬೇಕಾದದ್ದು ನಾಯಕರಾಗಿ ಅವರ ಜವಾಬ್ದಾರಿ.

—'ಪ್ರಜಾವಾಣಿ'

★ ಅಣು ಸ್ಥಾವರದ ಬಗ್ಗೆ ಗೊಂದಲ ಹುಟ್ಟಿಸುವ ಶಿವರಾಮ ಕಾರಂತರು ಈಗ ನೀಲಗಿರಿಯ ಬಗ್ಗೆ ಕೂಡ ಅದೇ ಬಗೆಯ ಗೊಂದಲಮಯ ಅಭಿಪ್ರಾಯ ವ್ಯಕ್ತಪಡಿಸಿ ರೈತರು ದಿಕ್ಕೆಡುವಂತೆ ಮಾಡಿದ್ದಾರೆ. ಸಾರಾಗಟಾಗಿ ನೀಲಗಿರಿ ಬೆಳೆದು ಈಗಾಗಲೇ ಅದರ ಫಲ ಉಣ್ಣುತ್ತಿರುವ ರೈತರು ಕಾರಂತರ ಮಾತುಗಳನ್ನು 'ಅಪ್ಪಟ ವೈಜ್ಞಾನಿಕ' ಎಂದು ನಂಬಬಹುದಾದ ಸಾಧ್ಯತೆ ಇರುವುದರಿಂದ ನೀಲಗಿರಿ ಈವರೆಗೆ ಮಾಡಿದ ಎಲ್ಲಾ ಅನಾಹುತಗಳ ಬಗೆಯೂ ಮತ್ತೊಮ್ಮೆ ಯೋಚಿಸಬೇಕಾಗಿದೆ.

—ಬಿ. ಚಂದ್ರೇ ಗೌಡ, 'ಲಂಕೇಶ್ ಪತ್ರಿಕೆ'

★ ಹೆಣ್ಣಾದರೆ ಭ್ರೂಣಾವಸ್ಥೆಯಲ್ಲೇ ಚಿವುಟಿ ಹಾಕಿ ಬಿಡಿ ಎನ್ನುವುದು ನರಮೇಧ. ಇದರಿಂದ ಉಂಟಾಗುವ ಸಾಮಾಜಿಕ ಅಸಮತೋಲನ. ಸ್ತ್ರೀ-ಪುರುಷರ ಪ್ರಮಾಣ ಕಡಿಮೆಯಾಗುವುದು ಸಮಾಜಘಾತುಕ ಪರಿಣಾಮಗಳು. ಇಲ್ಲವೆ ಹೆಣ್ಣಾದರೆ ಕೊಲ್ಲಿ ಎಂಬ ಪ್ರವೃತ್ತಿ ನಿಸರ್ಗವನ್ನೇ ಕೊಲ್ಲುವ ವಿನಾಶಕಾರಿ ಪ್ರವೃತ್ತಿ. ಬದುಕುವ ಹಕ್ಕನ್ನು ಭ್ರೂಣದಲ್ಲೇ ಕೊಲ್ಲುವ ಹಕ್ಕು ತಂದೆ-ತಾಯಿಗಳಿಗೂ ಇಲ್ಲ. ಯಾರಿಗೂ ಇಲ್ಲ. ಸಮಾಜ ಇಂಥ ಹೇಯಕೃತ್ಯಕ್ಕೆ ಮುಂದಾದಾಗ ಸರ್ಕಾರ ಅದಕ್ಕೆ ಕಡಿವಾಣ ಹಾಕಲು ಹಿಂದೆಗೆಯಬಾರದು.

—'ಪ್ರಜಾವಾಣಿ' ಸಂಪಾದಕೀಯ

Printed & Published by P. Ramachandra Rao on behalf of the Communist Party of India [Marxist] Karnataka State Committee
K. V. Temple Street, Sultanpet, Bangalore-560053
Sultanpet B-53 Phone : 75331
Editorial and Managerial Office : L-56, K. V. Temple Street,
Editor P. Ramachandra Rao
Managing Editor : N. K. Upadhyaya